ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 4 । ಸಂಚಿಕೆ : 1 । ಜನವರಿ : 2022 । ಪುಟಗಳು : 20 । ಬೆಲೆ : 25/-



2022

ಗತವರ್ಷದ ಮೃತಪಾಪವ ಸುಡು, ತೂರೆ;
ಅಪಜಯ ಅವಮಾನಗಳನು ಬಿಡು; ಮರೆ;
ಕಳಚಲಿ ಬೀಳಲಿ ಬಾಳಿನ ಹಳೆಪೊರೆ,
ನವ ವತ್ಸರವನು ಕೂಗಿ ಕರೆ!

– ಕುವೆಂಪು



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

**ರಾಜ್ಯದ ಸಮಸ್ತ ಸಹಕಾರಿ ಬಂಧುಗಳಿಗೆ 2022ರ ನೂತನ ವರ್ಷ, ಮಕರ ಸಂಕ್ರಾಂತಿ ಹಾಗೂ ಗಣರಾಜ್ಯೋತ್ಸವದ ಶುಭಾಶಯಗಳು**

ಆಡಳಿತ ಮಂಡಳಿ ಸದಸ್ಯರುಗಳು, ಕರ್ನಾಟಕ ರಾಜ್ಯ ಸಹಕಾರ
ಪತ್ತಿನ ಸಂಘಗಳ ಮಹಾಮಂಡಳ, ಬೆಂಗಳೂರು.



ನೇಕಾರರ ಪತ್ತಿನ ಸಹಕಾರ ಸಂಘ ನಿ., ನವನಗರ, ಬಾಗಲಕೋಟೆ ಈ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷರು ಹಾಗೂ ಪತ್ತಿನ ಮಹಾಮಂಡಳದ ನಿರ್ದೇಶಕರು ಆದ ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿರವರು ಶಿಕ್ಷಣ ನಿಧಿಯ ಚೆಕ್ಕನ್ನು ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ. ದೇವೇಗೌಡರವರಿಗೆ ನೀಡಿದರು. ಮಹಾಮಂಡಳದ ನಿರ್ದೇಶಕರು ಚಿತ್ರದಲ್ಲಿದ್ದಾರೆ.

## ಡಾ. ಭೂಕಾಂತ್ ಅವರಿಗೆ ಸಹಕಾರ ಜ್ಯೋತಿ ಪ್ರಶಸ್ತಿ




**ಶಿಕಾರಿಪುರ :** ಸಹಕಾರಿ ಧುರೀಣ, ಮಹಾಮಂಡಳದ ನಿರ್ದೇಶಕರಾದ ಡಾ.ಭೂಕಾಂತರವರಿಗೆ ಅವರ ಸಹಕಾರ ಕ್ಷೇತ್ರದಲ್ಲಿನ ಅಸಾಮಾನ್ಯ ಸೇವೆಯನ್ನು ಗುರುತಿಸಿ ಸಹಕಾರ ಧುರೀಣ ಎಸ್.ಎಸ್.ಗೌಡ ಪಾಟೀಲ್ ಸ್ಮರಣಾರ್ಥ ಐಕಾನ್ಸ್ ಆಫ್ ಇಂಡಿಯನ್ ಬ್ಯುಸಿನೆಸ್ ಇಂಗ್ಲೀಷ್ ಪಾಕ್ಷಿಕ ಪತ್ರಿಕೆ ವತಿಯಿಂದ ಬೆಂಗಳೂರಿನ ವಿಜಯನಗರದ ಕಾಸಿಯಾ ಭವನದಲ್ಲಿ ಡಿಸೆಂಬರ್ 18ರಂದು ನಡೆದ ಕಾರ್ಯಕ್ರಮದಲ್ಲಿ ಸಹಕಾರ ಜ್ಯೋತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.




ಬಡಗಬೆಟ್ಟು ಕ್ರೆಡಿಟ್ ಕೋ-ಆಪ್ ಸೊಸೈಟಿಯ ವಾರ್ಷಿಕ ಮಹಾಸಭೆಯು ದಿನಾಂಕ : 28-11-2021ರಂದು ವರ್ಚುಯಲ್ / ಆನ್‌ಲೈನ್ ಮೂಲಕ ಜರುಗಿದ್ದು, ಸಂಘದ ಅಧ್ಯಕ್ಷರಾದ ಶ್ರೀ ಸಂಜೀವ ಕಾಂಚನ್‌ರವರು ಅಧ್ಯಕ್ಷತೆ ವಹಿಸಿ ಸ್ವಾಗತಿಸಿದರು. ಸಂಘದ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಜಯಕರ ಶೆಟ್ಟಿ ಇಂದ್ರಾಳಿಯವರು ವಾರ್ಷಿಕ ವರದಿಯನ್ನು ಮತ್ತು ಪರಿಶೋಧಿತ ಲೆಕ್ಕಪತ್ರಗಳನ್ನು ಮಂಡಿಸಿದರು. ವರದಿ ಸಾಲಿನ ಅಂತ್ಯಕ್ಕೆ ಸಂಘವು ಒಟ್ಟು 17,501 ಸದಸ್ಯರಿಂದ ರೂ. 4.35 ಕೋಟಿ ಪಾಲು ಬಂಡವಾಳ ಹಾಗೂ ರೂ. 350.33 ಕೋಟಿ ಠೇವಣಿ ಸಂಗ್ರಹಿಸಿದ್ದು, ರೂ. 255.46 ಕೋಟಿ ಹೊರಬಾಕಿ ಸಾಲ ಇರುತ್ತದೆ. ವರದಿ ಸಾಲಿನಲ್ಲಿ ಸಂಘವು ರೂ.9.12 ಕೋಟಿ ನಿವ್ವಳ ಲಾಭ ಗಳಿಸಿದ್ದು, ಸಂಘದ ಸದಸ್ಯರಿಗೆ ಶೇ.15 ಡಿವಿಡೆಂಡ್ ಘೋಷಿಸಲಾಯಿತು.



ಪತ್ತಿನ ಮಹಾಮಂಡಳದ ನಿಕಟಪೂರ್ವ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಸಿ.ಎಂ.ಮಾರೇಗೌಡರವರು ದಿನಾಂಕ : 12.12.2021ರಂದು ನಡೆದ ರಾಜ್ಯ ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ನಿರ್ದೇಶಕರುಗಳಾದ ಶ್ರೀ ಎಂ.ಜೆ. ನರೇಂದ್ರಕುಮಾರ, ಶ್ರೀ ತಮ್ಮಣ್ಣಬಾಲಪ್ಪ ಕೆಂಚರಡ್ಡಿ, ಶ್ರೀ ಧರೇಪ್ಪ ಮಹದೇವ ಆಲಗೂರ ಮತ್ತು ಶ್ರೀ ಹೆಚ್.ಟಿ. ನಾಗೇಶ್ ರವರು ಅಭಿನಂದನೆ ಸಲ್ಲಿಸಿದ್ದಾರೆ.

## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

– ಸಂಪಾದಕರು






ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ
ಅಧ್ಯಕ್ಷರು

> “ವಿವಿಧ ರೀತಿಯ ಉದ್ದೇಶಗಳನ್ನು ಇರಿಸಿಕೊಂಡು ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳು 2022ರ ವರ್ಷದಲ್ಲಿ ಸಹಕಾರಿ ಸದಸ್ಯರಲ್ಲಿ ಜಾಗೃತಿ ಮೂಡಿಸಿ ಸೇವೆಗಳನ್ನು ವಿಸ್ತರಿಸುವುದು, ಹಿಂದಿನ ಬಾಕಿ ಪಾವತಿಯಾಗದಿದ್ದರೆ, ಅವುಗಳನ್ನು ಪಾವತಿಸುವಂತೆ ಮನವೊಲಿಸುವುದು, ಆರ್ಥಿಕ ಹಾಗೂ ಇತರೆ ಸೇವಾ ಅಗತ್ಯಗಳಿರುವ ಹೊಸ ಸದಸ್ಯರಿಗೆ ಸೌಲಭ್ಯಗಳನ್ನು ಒದಗಿಸುವ ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿಸುವಲ್ಲಿ ಮುನ್ನಡೆ ಸಾಧಿಸಿ “ಸಹಕಾರ ಸಂಕಲ್ಪ”ದೊಂದಿಗೆ ಹೊಸ ವ್ಯವಹಾರಗಳನ್ನು ವೃದ್ಧಿಸಿಕೊಂಡು ಇತಿಹಾಸವನ್ನು ಸೃಷ್ಟಿಮಾಡಬೇಕಿದೆ.”

# ನೂತನ ವರ್ಷ
# 2022ರ ಶುಭಾಷಯಗಳು
## ಸಹಕಾರ ಸಂಕಲ್ಪದೊಂದಿಗೆ ಮುನ್ನಡೆಯೋಣ



2021ರ ವರ್ಷ ಕಳೆದಿದೆ, 2022ರ ನೂತನ ವರ್ಷಕ್ಕೆ ನಾವೆಲ್ಲರೂ ಕಾಲಿರಿಸಿದ್ದೇವೆ. ಸಹಕಾರಿ ಬಂಧುಗಳಿಗೆ, ಅಧಿಕಾರಿ, ಸಿಬ್ಬಂದಿ ವರ್ಗದವರಿಗೆಲ್ಲರಿಗೂ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಆಡಳಿತ ಮಂಡಳಿಯ ಪರವಾಗಿ ಶುಭಾಷಯಗಳನ್ನು ಅರ್ಪಿಸುತ್ತಿದ್ದೇನೆ.

ಕಳೆದ 2 ವರ್ಷಗಳಲ್ಲಿ ಕೋವಿಡ್–19ರ ಪರಿಣಾಮಗಳು, ಅತಿವೃಷ್ಟಿ ಅನಾವೃಷ್ಟಿಯಿಂದ ಅಭಿವೃದ್ಧಿ ಕಾರ್ಯಗಳು ಅಷ್ಟೇನು ಆಶಾದಾಯಕವಾಗಿ ತೃಪ್ತಿಕರವಾಗಿಲ್ಲ ಎಂದೇ ಹೇಳಬಹುದು.

ವಿವಿಧ ರೀತಿಯ ಉದ್ದೇಶಗಳನ್ನು ಇರಿಸಿಕೊಂಡು ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳು 2022ರ ವರ್ಷದಲ್ಲಿ ಸಹಕಾರಿ ಸದಸ್ಯರಲ್ಲಿ ಜಾಗೃತಿ ಮೂಡಿಸಿ ಸೇವೆಗಳನ್ನು ವಿಸ್ತರಿಸುವುದು, ಹಿಂದಿನ ಬಾಕಿ ಪಾವತಿಯಾಗದಿದ್ದರೆ, ಅವುಗಳನ್ನು ಪಾವತಿಸುವಂತೆ ಮನವೊಲಿಸುವುದು, ಆರ್ಥಿಕ ಹಾಗೂ ಇತರೆ ಸೇವಾ ಅಗತ್ಯಗಳಿರುವ ಹೊಸ ಸದಸ್ಯರಿಗೆ ಸೌಲಭ್ಯಗಳನ್ನು ಒದಗಿಸುವ ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿಸುವಲ್ಲಿ ಮುನ್ನಡೆ ಸಾಧಿಸಿ “ಸಹಕಾರ ಸಂಕಲ್ಪ”ದೊಂದಿಗೆ ಹೊಸ ವ್ಯವಹಾರಗಳನ್ನು ವೃದ್ಧಿಸಿಕೊಂಡು ಇತಿಹಾಸವನ್ನು ಸೃಷ್ಟಿಮಾಡಬೇಕಿದೆ.

ಸಹಕಾರ ಸಂಘಗಳು ಹೆಚ್ಚು ಉತ್ಸಾಹದಿಂದ ಕೆಲಸ ಮಾಡುವಂತಾದರೆ ಸದಸ್ಯರು ಗ್ರಾಹಕರಲ್ಲಿ ನಂಬಿಕೆ, ವಿಶ್ವಾಸಗಳನ್ನು ಹೆಚ್ಚಿಸಲು ಸಾಧ್ಯವಾಗಲಿದೆ. ಈಗಾಗಲೇ ಡಿಸೆಂಬರ್–25, 2021ಕ್ಕೆ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಗಳು ಮುಗಿದಿದ್ದು 2022–23ರ ಸಾಲಿಗೆ ಗುರಿ ಸಾಧನೆಗಳ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಂತೆ ಸಾಲವಿತರಣೆ–ಕಂತುಗಳ ಪಾವತಿಗೂ ಕ್ರಮವಿಟ್ಟು ಸದಸ್ಯರಲ್ಲಿ ಜಾಗೃತಿ ಅಭಿಯಾನ ಏರ್ಪಡಿಸಿದರೆ ಸಂಘಗಳು ಸದೃಢಗೊಳ್ಳಲು ಸಾಧ್ಯವಾಗುತ್ತದೆ. ಕರ್ನಾಟಕ ಸಹಕಾರ ಚಳುವಳಿ ಬಲವರ್ಧನೆಗೊಂಡು ರಾಷ್ಟ್ರದ ಸಹಕಾರ ಚಳುವಳಿಯಲ್ಲಿ ಅಗ್ರಸ್ಥಾನಕ್ಕೇರಲು ಸಾಧ್ಯವಾಗುತ್ತದೆ.

ಮತ್ತೊಮ್ಮೆ ತಮಗೆಲ್ಲರಿಗೂ ನೂತನ ವರ್ಷ–2022, ಸುಗ್ಗಿಯ ಹಬ್ಬ ಮಕರ ಸಂಕ್ರಾಂತಿ ಹಾಗೂ ರಾಷ್ಟ್ರೀಯ ಹಬ್ಬ ಗಣರಾಜ್ಯೋತ್ಸವದ ಶುಭಾಶಯಗಳು.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**


ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

## ಹಿರಿಯ ಸಹಕಾರಿ, ಮಾಜಿ ಸಚಿವ ಆರ್.ಎಲ್. ಜಾಲಪ್ಪ ಇನ್ನಿಲ್ಲ : ಗಣ್ಯರ, ಸಹಕಾರಿ ಮುಖಂಡರ ಕಂಬನಿ

**ಬೆಂಗಳೂರು :** ಹಿರಿಯ ಸಹಕಾರಿ ಮುಖಂಡರಾಗಿ ಹಲವಾರು ಸಂಘ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ, ರಾಜಕೀಯ ಮುತ್ಸದ್ಧಿಯಾಗಿ ಶಾಸಕ, ಸಂಸದ, ಸಚಿವರಾಗಿ ಅನುಪಮ ಸೇವೆ ಸಲ್ಲಿಸಿದ್ದ, ಸ್ವತಃ ರೈತರಾಗಿ ರಾಜ್ಯದ ಕೃಷಿ ತೋಟಗಾರಿಕೆ ಬಗ್ಗೆ ಹೊಸ ಚಿಂತನೆ ನಡೆಸಿ, ಅಭಿವೃದ್ಧಿ ಪಥದತ್ತ ಕೊಂಡೊಯ್ದ ಆರ್.ಎಲ್. ಜಾಲಪ್ಪ ನವರು ನಿಧನರಾಗಿದ್ದಾರೆ. ಅವರಿಗೆ 97 ವರ್ಷ ವಯಸ್ಸಾಗಿತ್ತು.



ಆರ್.ಎಲ್. ಜಾಲಪ್ಪನವರು ತೂಬಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ದೊಡ್ಡಬಳ್ಳಾಪುರ ತಾಲ್ಲೂಕು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು, ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು, ರಾಜ್ಯ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕು ಮೊದಲಾದವುಗಳ ಅಧ್ಯಕ್ಷರಾಗಿ ದಶಕಗಳ ಕಾಲ ಸಹಕಾರಾಭಿವೃದ್ಧಿಗೆ ಶ್ರಮಿಸಿದವರು.

ರೈತಪರ ಒಲವುಳ್ಳವರಾಗಿ, ರೈತರ ಆರ್ಥಿಕ ಬೆಳವಣಿಗೆಗೆ ವಿಶೇಷವಾಗಿ ಶ್ರಮಿಸಿದವರು. ಕರ್ನಾಟಕ ರಾಜ್ಯ ಸಹಕಾರಿ ಚಲನಚಿತ್ರ ಮತ್ತು ಲಲಿತಕಲಾ ಮಹಾಮಂಡಳದ ಖಜಾಂಚಿಯಾಗಿಯೂ ಸೇವೆ ಸಲ್ಲಿಸಿದವರು. ನಮ್ಮ ರಾಜ್ಯದ ಸಹಕಾರ ಮತ್ತು ಮಾರುಕಟ್ಟೆ ಸಚಿವರಾಗಿ ಸಹಕಾರ ವ್ಯವಸ್ಥೆಯನ್ನು ಭದ್ರಬುನಾದಿಯ ಮೇಲೆ ಕಟ್ಟಲು ಸಹಕಾರಿ ಕಾನೂನಿಗೆ ದೂರಗಾಮಿ ತಿದ್ದುಪಡಿಗಳನ್ನು ತಂದವರು. ಕಂದಾಯ ಸಚಿವರಾಗಿ, ಗೃಹ ಸಚಿವರಾಗಿ ದಕ್ಷ ಆಡಳಿತವನ್ನು ನೀಡಿದವರು. ಮೊದಲ ಬಾರಿಗೆ ರೈತರ ಸಾಲಮನ್ನಾ ಜಾರಿಗೆ ಪ್ರಯತ್ನಿಸಿದವರು. ರಾಜ್ಯದ ಅಪೆಕ್ಸ್ ಬ್ಯಾಂಕ್, ಮಾರಾಟ ಸಹಕಾರ ಮಹಾಮಂಡಳಗಳ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದವರು. ಕೃಷಿ, ಸಹಕಾರ ವಲಯದ ಅಧ್ಯಯನಕ್ಕಾಗಿ ಹಲವು ಬಾರಿ ವಿದೇಶ ಪ್ರವಾಸ ಮಾಡಿದರು. ಹಿರಿಯ ರಾಜಕೀಯ ಮುತ್ಸದ್ಧಿ ಹೆಚ್.ಡಿ. ದೇವೇಗೌಡರು ಪ್ರಧಾನಿಯಾಗಿದ್ದಾಗ ಆರ್. ಎಲ್. ಜಾಲಪ್ಪನವರು ಕೇಂದ್ರ ಸಚಿವರಾಗಿ ದಕ್ಷತೆಯನ್ನು ತೋರಿದರು. ಜಾಲಪ್ಪನವರು ದೇವರಾಜ ಅರಸ್, ರಾಮಕೃಷ್ಣ ಹೆಗಡೆ ಅವರುಗಳಿಗೆ ಆಪ್ತರಾಗಿದ್ದರು.

ಹಿರಿಯ ಸಹಕಾರಿ ಮುಖಂಡರಾದ ಬಿ.ಎಸ್. ವಿಶ್ವನಾಥ್, ಜಿ.ಟಿ. ದೇವೇಗೌಡ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ವ್ಯವಸ್ಥಾಪಕ ನಿರ್ದೇಶಕರು, ಅಧಿಕಾರಿಗಳು ಸಿಬ್ಬಂದಿ ಜಾಲಪ್ಪ ಅವರ ನಿಧನಕ್ಕೆ ತಮ್ಮ ಶೋಕವನ್ನು ವ್ಯಕ್ತಪಡಿಸಿ, ಜಾಲಪ್ಪನವರ ಆತ್ಮಕ್ಕೆ ಚಿರಶಾಂತಿ ನೀಡಿ, ಅವರ ಕುಟುಂಬ ವರ್ಗದವರಿಗೆ ನಿಧನದ ದುಃಖ ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

**ಸುಭಾಷಿತ :** ಮನುಷ್ಯನ ಉದ್ಯೋಗಕ್ಕೂ ಆದರ್ಶಕ್ಕೂ ಪರಸ್ಪರ ಹೊಂದಿಕೆ ಬಾರದೆ ಹೋದಲ್ಲಿ ಜೀವನದಲ್ಲಿ ಸುಖ ಸಿಗಲಾರದು. – ಡಾ. ಶಿವರಾಮ ಕಾರಂತ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು
ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.,
ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು
ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ,
ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ
ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಶೀಘ್ರದಲ್ಲೇ ಹೊಸ ಸಹಕಾರಿ ನೀತಿ; ಸಹಕಾರ ವಿಷಯಗಳ ಅಧ್ಯಯನಕ್ಕೆ ಶೀಘ್ರವೇ ಹೊಸ ವಿವಿ : ಕೇಂದ್ರ ಸಚಿವ ಅಮಿತ್ ಶಾ



ಪುಣೆ : ಸಹಕಾರಿ ವ್ಯವಸ್ಥಾಪನಾ ವಿಷಯಗಳ ವ್ಯಾಸಂಗಕ್ಕಾಗಿ ರಾಷ್ಟ್ರಮಟ್ಟದಲ್ಲಿ ವಿಶ್ವವಿದ್ಯಾಲಯ ಆರಂಭಿಸಲಾಗುವುದು ಎಂದು ಕೇಂದ್ರದ ಗೃಹ ಮತ್ತು ಸಹಕಾರ ಸಚಿವರಾದ ಅಮಿತ್ ಶಾ ಅವರು ಹೇಳಿದರು.

ಇತ್ತೀಚೆಗೆ ವೈಕುಂಠ ಮೆಹ್ತಾ ರಾಷ್ಟ್ರೀಯ ಸಹಕಾರಿ ವ್ಯವಸ್ಥಾಪನಾ ಸಂಸ್ಥೆಯ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಸಹಕಾರಿ ಕ್ಷೇತ್ರದಲ್ಲಿ ಅಧ್ಯಯನಕ್ಕೆ ಹತ್ತು ಹಲವಾರು ವಿಷಯಗಳಿವೆ. ಇಂಥ ಎಲ್ಲ ವಿಷಯಗಳನ್ನು ಕಲಿಸುವ ವಿಶ್ವವಿದ್ಯಾಲಯವನ್ನು ಕೇಂದ್ರ ಶೀಘ್ರದಲ್ಲೇ ಸ್ಥಾಪಿಸಲಿದೆ. ಎಲ್ಲಾ ರಾಜ್ಯಗಳ ಕಾಲೇಜುಗಳು ಈ ವಿಶ್ವವಿದ್ಯಾಲಯದ ಅಂಗ ಸಂಸ್ಥೆಗಳಾಗಲಿವೆ. ಪದವಿ ಮುಗಿಸಿ ಹೊರ ಬರುವ ವಿದ್ಯಾರ್ಥಿಗಳಿಗೆ ಮುಂದೆ ಸಹಕಾರಿ ವಲಯದಲ್ಲಿ ಹಲವು ಅವಕಾಶಗಳು ಲಭಿಸಲಿವೆ ಎಂದರು. ಮುಂದಿನ 25 ವರ್ಷಗಳ ಭವಿಷ್ಯವನ್ನು ಗುರಿಯಾಗಿಸಿಕೊಂಡು ಸಹಕಾರಿ ಕ್ಷೇತ್ರವನ್ನು ಬಲಪಡಿಸಲು ಕೇಂದ್ರವು ಶೀಘ್ರದಲ್ಲೇ ನೂತನ ಸಹಕಾರ ನೀತಿಯನ್ನೂ ರಚಿಸುವ ಕಾರ್ಯ ಭರದಲ್ಲಿ ಸಾಗುತ್ತಿದೆ ಎಂದರು.

ಸಹಕಾರಿ ಬ್ಯಾಂಕುಗಳಿಗೆ ತಡೆರಹಿತ ಮತ್ತು ಪಾರದರ್ಶಕ ಹಣಕಾಸು ವ್ಯವಸ್ಥೆಯನ್ನು ಸೃಜಿಸಲಾಗುವುದು. ದೇಶದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಡಿಸಿಸಿ ಬ್ಯಾಂಕಗಳು ಮತ್ತು ಅಪೆಕ್ಸ್ ಬ್ಯಾಂಕುಗಳು ಉತ್ತಮ ರಚನೆ ಹೊಂದಿದ್ದು. ನಬಾರ್ಡ್ ಮಾರ್ಗದರ್ಶನದಲ್ಲಿ ಸೇವೆ ಸಲ್ಲಿಸುತ್ತಿವೆ. ಈ ಕೃಷಿ ಪತ್ತಿನ ಸಾಲ ವಿತರಣೆಯಲ್ಲಿ ಕೇಂದ್ರ ಸರ್ಕಾರ ಪಾರದರ್ಶಿಕ, ಆಡಳಿತ ತರಲು ಚಿಂತನೆ ನಡೆಸಿದೆ ಎಂದರು.

ಮೀನುಗಾರಿಕೆ, ಸಣ್ಣ ನೀರಾವರಿಯಂತಹ ವಿವಿಧ ಕ್ಷೇತ್ರಗಳಿಗಾಗಿ 23 ವಿವಿಧ ಇಲಾಖೆಗಳಲ್ಲಿ ಹಲವಾರು ಸರ್ಕಾರಿ ಯೋಜನೆಗಳಿವೆ, ಇವೆಲ್ಲವನ್ನೂ ಸಹಕಾರ ಇಲಾಖೆಯ ಆಶ್ರಯ ಸಂಸ್ಥೆ (ಅಂಬ್ರೆಲಾ ಆರ್ಗನೇಜಷನ್) ಅಡಿಯಲ್ಲಿ ತರಲಾಗುವುದು ಎಂದರು.


ಕೇಂದ್ರ ಸರ್ಕಾರದ ಮಹಾತ್ವಾಕಾಂಕ್ಷೆಯ ಆತ್ಮ ನಿರ್ಭರ ಭಾರತ ಯೋಜನೆ ಅಡಿಯಲ್ಲಿ ದೇಶದ ಎಲ್ಲಾ ಜನರನ್ನು ಸ್ವಾವಲಂಬಿಗಳನ್ನಾಗಿಸಲು ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಕೃಷಿಕರು ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡಬೇಕಾಗಿದೆ. ಇದರಿಂದ ಉತ್ಪನ್ನಗಳ ಗುಣಮಟ್ಟವೂ ಹೆಚ್ಚುತ್ತದೆ. ಮಣ್ಣಿನ ಗುಣಮಟ್ಟ ಮತ್ತು ಆ ಮಣ್ಣಿನ ಬೆಳೆಯಬಹುದಾದ ಬೆಳೆಗಳ ಬಗ್ಗೆ ಪ್ರಯೋಗಗಳು ಅಗತ್ಯವಾಗಿಯೂ ಇವೆ ಎಂದರು. ಇಫ್ಕೋ, ಅಮೂಲ್, ಲಿಜ್ಜತ್ ಪಾಪಡ್, ಕ್ರಿಬ್ಕೋನಂತಹ ಸಂಸ್ಥೆಗಳು ಸಹಕಾರಿ ಕ್ಷೇತ್ರಗಳಲ್ಲಿ ಮೈಲಿಗಲ್ಲಾಗಿವೆ ಎಂದು ಸಚಿವ ಅಮಿತ್ ಶಾ ಅವರು ಪ್ರಶಂಸೆ ವ್ಯಕ್ತ ಮಾಡಿದರು.

## ಬರಲಿದೆ ಬ್ಯಾಡ್ ಬ್ಯಾಂಕ್

ಬಹುನಿರೀಕ್ಷಿತ ಸರಕಾರಿ ಬೆಂಬಲಿತ ಬ್ಯಾಡ್ ಬ್ಯಾಂಕ್ ಮುಂದಿನ ಜನವರಿಯಲ್ಲಿ ಅಸ್ತಿತ್ವಕ್ಕೆ ಬರಲಿದೆ. ಇಂಡಿಯಾ ಡೆಬ್ಟ್ ರೆಸೆಲ್ಯೂಷನ್ ಕಂಪನಿ ಲಿಮಿಟೆಡ್ (ಐಡಿಆರ್‌ಸಿಎಲ್) ಎಂದರೇನು? ಇದರ ಉದ್ದೇಶವೇನು?

**ಏನಿದು ಬ್ಯಾಡ್ ಬ್ಯಾಂಕ್? :** ಬ್ಯಾಡ್ ಬ್ಯಾಂಕ್ ಎನ್ನುವುದು ಬ್ಯಾಂಕ್‌ಗಳಲ್ಲಿರುವ ವಸೂಲಾಗದಿರುವ ಸಾಲಗಳನ್ನು (ಎನ್‌ಪಿಎ) ಖರೀದಿಸಿ ನಿರ್ವಹಿಸುವ ಪ್ರತ್ಯೇಕ ಸಂಸ್ಥೆ ಇದು ಅಸೆಸ್‌ಮ್ಯಾನೇಜ್ ಮೆಂಟ್ ಸಂಸ್ಥೆಯಾಗಿದ್ದು (ಎಎಂಸಿ) ಕಾರ್ಪೊರೇಟ್ ಸ್ವರೂಪದ ಬ್ಯಾಡ್ ಬ್ಯಾಂಕ್ ಸುಸ್ತಿ ಸಾಲಗಳ ಮರು ವಸೂಲಾತಿಗೆ ಅಗತ್ಯ ವೃತ್ತಿಪರತೆಯನ್ನು, ಮೂಲಸೌಕರ್ಯಗಳನ್ನು ಒಳಗೊಂಡಿರುತ್ತದೆ. ಬ್ಯಾಂಕಿಂಗ್ ಕ್ಷೇತ್ರದ ಆರೋಗ್ಯಕ್ಕೆ ಬ್ಯಾಡ್ ಬ್ಯಾಂಕ್ ಸಹಕಾರಿ, ಬ್ಯಾಂಕ್‌ಗಳು ಈಗಾಗಲೇ 22 ಖಾತೆಗಳಲ್ಲಿನ 82000 ಕೋಟಿ ರೂ. ಸುಸ್ತಿ ಸಾಲಗಳನ್ನು ಬ್ಯಾಡ್ ಬ್ಯಾಂಕ್‌ಗೆ ಒದಗಿಸಿವೆ. ಸುಸ್ತಿ ಸಾಲಗಳನ್ನು ಖರೀದಿಸುವ ಬ್ಯಾಡ್ ಬ್ಯಾಂಕ್ ನಂತರ ಅವುಗಳನ್ನು ಮಾರುಕಟ್ಟೆ ಮೌಲ್ಯಕ್ಕೆ ಮಾರಾಟ ಮಾಡುತ್ತವೆ. ಇದರಿಂದ ಬ್ಯಾಂಕುಗಳಿಗೆ ಸಾಲ ಮರು ವಸೂಲಾತಿಯಾದಂತಗುತ್ತದೆ. ಬ್ಯಾಡ್ ಬ್ಯಾಂಕ್‌ಗೂ ನಿರ್ದಿಷ್ಟ ಆದಾಯ ಸಿಗುತ್ತದೆ.




**ವೃತ್ತಿಪರರ ನೇಮಕ :** ಬ್ಯಾಡ್ ಬ್ಯಾಂಕ್ ಐಡಿಆರ್‌ಸಿಎಲ್ ಸುಸ್ತಿ ಸಾಲಗಳ ನಿರ್ವಹಣೆಗೆ ಸಂಬಂಧಿಸಿದಂತೆ 50 ಮಂದಿ ವೃತ್ತಿಪರರರನ್ನು ಆರಂಭಿಕ ಹಂತದಲ್ಲಿ ನೇಮಿಸಲಿದೆ ಸಂಸ್ಥೆಯ ಮೂಲ ಸೌಕರ್ಯವನ್ನು ವ್ಯವಸ್ಥೆಗೊಳಿಸಲಾಗುತ್ತಿದೆ.

**ಉದ್ದಿಮೆಗಳಲ್ಲಿ ಎನ್‌ಪಿಎ :** ವಿದ್ಯುತ್, ರಸ್ತೆ ನಿರ್ಮಾಣ, ಮೂಲಸೌಕರ್ಯ ಉತ್ಪಾದನೆ ಸೇರಿದಂತೆ, ಹಲವಾರು ವಲಯದಲ್ಲಿನ ಕಂಪನಿಗಳಲ್ಲಿ ವಸೂಲಾಗದ ಸಾಲಗಳಿವೆ.

# ವಿಧಾನ ಪರಿಷತ್ತಿಗೆ ಆಯ್ಕೆ

ದಿನಾಂಕ : 10.12.2021 ರಂದು ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ 25 ನೂತನ ಸದಸ್ಯರು ಆಯ್ಕೆ ಆಯ್ಕೆಯಾಗಿದ್ದಾರೆ.

**ಮೈಸೂರು-ಚಾಮರಾಜನಗರ (ದ್ವಿ-ಸದಸ್ಯ ಕ್ಷೇತ್ರ)**


ಡಾ. ಡಿ.ತಿಮ್ಮಯ್ಯ


ಸಿ.ಎನ್. ಮಂಜೇಗೌಡ

**ದಕ್ಷಿಣ ಕನ್ನಡ (ದ್ವಿ ಸದಸ್ಯ ಕ್ಷೇತ್ರ)**


ಕೋಟ ಶ್ರೀನಿವಾಸ ಪೂಜಾರಿ


ಡಾ। ಮಂಜುನಾಥ ಭಂಡಾರಿ

**ಚಿತ್ರದುರ್ಗ**


ಕೆ.ಎಸ್. ನವೀನ್

**ಶಿವಮೊಗ್ಗ**


ಡಿ.ಎಸ್. ಅರುಣ್

**ಬೆಳಗಾವಿ (ದ್ವಿ ಸದಸ್ಯ ಕ್ಷೇತ್ರ)**


ಚನ್ನರಾಜ್ ಹಟ್ಟಿಹೊಳಿ


ಲಖನ್ ಜಾರಕಿಹೊಳಿ

**ಬೆಂಗಳೂರು**


ಹೆಚ್.ಎಸ್. ಗೋಪಿನಾಥ ರೆಡ್ಡಿ

**ಕೊಡಗು**


ಸುಜಾ ಕುಶಾಲಪ್ಪ


**ಉತ್ತರ ಕನ್ನಡ**


ಗಣಪತಿ ಉಳ್ವೇಕರ್

**ಕಲಬುರಗಿ**


ಬಿ.ಜಿ. ಪಾಟೀಲ್

**ಬಳ್ಳಾರಿ-ವಿಜಯನಗರ**


ವೈ.ಎಂ. ಸತೀಶ

**ಧಾರವಾಡ (ದ್ವಿ ಸದಸ್ಯ ಕ್ಷೇತ್ರ)**


ಪ್ರದೀಪ್ ಶೆಟ್ಟರ್


ಸಲೀಂ ಅಹಮದ್

**ವಿಜಯಪುರ (ದ್ವಿ ಸದಸ್ಯ ಕ್ಷೇತ್ರ)**



ಪಿ.ಎಚ್. ಪೂಜಾರ


ಸುನೀಲ ಗೌಡ ಪಾಟೀಲ

**ಮಂಡ್ಯ**


ದಿನೇಶ್ ಗೂಳಿಗೌಡ

**ರಾಯಚೂರು-ಕೊಪ್ಪಳ**


ಶರಣಗೌಡ ಪಾಟೀಲ್

**ಬೀದರ್**


ಭೀಮಾರಾವ್ ಪಾಟೀಲ್

**ಕೋಲಾರ-ಚಿಕ್ಕಬಳ್ಳಾಪುರ**


ಎಂ.ಎಲ್. ಅನಿಲ್ ಕುಮಾರ

**ಬೆಂಗಳೂರು ಗ್ರಾಮಾಂತರ**


ಎಸ್. ರವಿ

**ತುಮಕೂರು**


ಆರ್. ರಾಜೇಂದ್ರ

**ಹಾಸನ**


ಡಾ। ಸೂರಜ್ ರೇವಣ್ಣ

**ಚಿಕ್ಕಮಗಳೂರು**


ಎಂ.ಕೆ. ಪ್ರಾಣೇಶ್

# ನಂಬಿಕೆ, ವಿಶ್ವಾಸಾರ್ಹತೆ – ಪಾರದರ್ಶಕ ಆಡಳಿತಕ್ಕೆ ಮನ್ನಣೆ ಪ್ರಗತಿಯ ಪಥದಲ್ಲಿ ಶ್ರೀ ಕನಕ ಪತ್ತಿನ ಸಹಕಾರ ಸಂಘ, ಶಿರಾ




ಸಹಕಾರ ಚಳವಳಿಯು ಇಂದು ಆಲದ ಮರದಂತೆ ವಿಶಾಲವಾಗಿ ಬೆಳೆದು ನಿಂತಿದೆ. ಆರ್ಥಿಕವಾಗಿ ಹಿಂದುಳಿದ ಜನರ ಅಗತ್ಯಗಳನ್ನು ಪೂರೈಸಿ, ಅವರಲ್ಲಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಈ ಕ್ಷೇತ್ರ ಸದಸ್ಯ ಸ್ನೇಹಿಯಾಗಿ ನೆರವಾಗುತ್ತಾ ಬಂದಿದೆ. ಪಟ್ಟಣ ಪ್ರದೇಶಗಳಲ್ಲಿನ ಜನರ ಸೇವೆಗಾಗಿ ಪತ್ತಿನ ಸಹಕಾರ ಸಂಘಗಳು ಉತ್ತಮ ಸೇವೆ ಸಲ್ಲಿಸುತ್ತಿವೆ. ಅಂಥ ಪತ್ತಿನ ಸಹಕಾರ ಸಂಘಗಳಲ್ಲಿ ಶಿರಾ ಪಟ್ಟಣದ "ಶ್ರೀ ಕನಕ ಪತ್ತಿನ ಸಹಕಾರ ಸಂಘ"ವು ತನ್ನ ಪಾರದರ್ಶಕ ಆಡಳಿತದ ಜೊತೆಗೆ ಸದಸ್ಯರು, ಗ್ರಾಹಕರಲ್ಲಿ ನಂಬಿಕೆ ವಿಶ್ವಾಸರ್ಹತೆಯೊಂದಿಗೆ ಉತ್ತಮ ಸೇವೆಗಳ ಮೂಲಕ ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿದೆ.



ದಿ। ಎಸ್.ಕೆ. ದಾಸಪ್ಪ
**ಸಂಸ್ಥಾಪಕ ಅಧ್ಯಕ್ಷರು**

ತುಮಕೂರು ಜಿಲ್ಲೆಯ ಅತ್ಯುತ್ತಮ ಸಹಕಾರ ಸಂಸ್ಥೆಗಳಲ್ಲಿ ಶ್ರೀ ಕನಕ ಪತ್ತಿನ ಸಹಕಾರ ಸಂಘವು ವಿಶೇಷ ಸ್ಥಾನ ಗಳಿಸಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳ ಸಾಲಿನಲ್ಲಿ ಅಗ್ರಪಂಕ್ತಿಯಲ್ಲಿದೆ. ಸಂಘವು ದಿನಾಂಕ : 31.3.2021ಕ್ಕೆ 7981 ಸದಸ್ಯರು, 150.01 ಲಕ್ಷ ರೂ. ಷೇರು ಬಂಡವಾಳ, 4822.03 ಲಕ್ಷ ರೂ. ಠೇವಣಿಗಳು, ರೂ. 4850.05 ಲಕ್ಷ ರೂ. ಸಾಲ ನೀಡಿಕೆ, ರೂ. 6299.07 ಲಕ್ಷ ದುಡಿಯುವ ಬಂಡವಾಳ, ಸಾಲ ವಸೂಲಾತಿ ಪ್ರಮಾಣ ಶೇ. 92 ರಷ್ಟು ಇದ್ದು, ವರದಿ ಸಾಲಿನಲ್ಲಿ 145.67 ಲಕ್ಷ ನಿವ್ವಳ ಲಾಭ ಗಳಿಸಿದೆ.

ಇತ್ತೀಚೆಗೆ ಈ ಸಂಘಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸಂಘದ ಕಾರ್ಯಚಟುವಟಿಕೆಗಳನ್ನು ಅವಲೋಕಿಸಿದಾಗ ತ್ವರಿತಗತಿಯಲ್ಲಿ ಸದಸ್ಯರಿಗೆ ಸಾಲ, ರೈತರಿಗೆ, ಕಾರ್ಮಿಕರಿಗೆ ಆರ್ಥಿಕ ನೆರವು ನೀಡಿ ಅವರೆಲ್ಲರನ್ನು ಸಮಾಜದ ಮುಖ್ಯವಾಹಿನಿಗೆ ಬರುವಂತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

ದಿನಾಂಕ : 22.2.2002 ರಲ್ಲಿ ಶಿರಾ ಪಟ್ಟಣದಲ್ಲಿ ಸಹಕಾರ ಮುಖಂಡರು ಹಾಗೂ ಶಾಸಕರಾಗಿದ್ದ ಎಸ್.ಕೆ. ದಾಸಪ್ಪ ಅವರ ದೂರದೃಷ್ಟಿಯ ಫಲವಾಗಿ ಆರಂಭಗೊಂಡ ಸಂಘವು ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. 27 ಸಿಬ್ಬಂದಿಗಳು, ಸುಸಜ್ಜಿತ ಕಟ್ಟಡ, 7 ಶಾಖೆಗಳನ್ನು ಹೊಂದಿರುವ "ಶ್ರೀ ಕನಕ ಪತ್ತಿನ ಸಹಕಾರ ಸಂಘ"ವು 2 ಶಾಖೆಗಳಲ್ಲಿ ಸ್ವಂತ ಕಟ್ಟಡಗಳನ್ನು ಹೊಂದಿದೆ. ಹಾಗೂ ಇನ್ನೂ 2 ಕಟ್ಟಡಗಳು ನಿರ್ಮಾಣ ಹಂತದಲ್ಲಿವೆ. ಈ ಸಂಘವು ಇತರೆ ಸಹಕಾರ ಸಂಸ್ಥೆಗಳಿಗೆ ಮಾದರಿಯೆಂಬಂತೆ ಬೆಳೆಯುತ್ತಿರುವುದರಿಂದ ಸದಸ್ಯರು, ಗ್ರಾಹಕರಲ್ಲಿ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಂಡಿದೆ.

ಸಂಘವು ಆರ್ಥಿಕವಾಗಿ ದುರ್ಬಲರಾಗಿರುವ ಸಾರ್ವಜನಿಕರು, ಕೂಲಿಕಾರ್ಮಿಕರು, ಸಣ್ಣ ವ್ಯಾಪಾರಿಗಳಿಗೆ, ವಾಹನ ಚಾಲಕರು, ಬೀದಿಬದಿ ವ್ಯಾಪಾರಿಗಳು ಸೇರಿದಂತೆ ಸಂಘದ ಮೇಲೆ ವಿಶ್ವಾಸವಿರಿಸಿ ಬರುವವರಿಗೆ ಉತ್ತಮ ಸೇವೆ ನೀಡುವಲ್ಲಿ ಪಟ್ಟಣದ ಅತ್ಯುತ್ತಮ ಸಹಕಾರ ಸಂಘಗಳಲ್ಲಿ ಒಂದಾಗಿದೆ. ಸೇವಾ ಮನೋಭಾವ, ಸಾಮಾಜಿಕ ಕಳಕಳಿಯ ಕಾರಣಗಳಿಂದಾಗಿ ಸಂಘವು ಹಲವಾರು ಪ್ರಶಸ್ತಿಗಳಿಗೆ ಬಾಜನವಾಗಿದೆ. ಇವೆಲ್ಲ ಸಾಧನೆಗಳಿಗೆ ಬದ್ಧತೆಯುಳ್ಳ ಆಡಳಿತ ಮಂಡಳಿ – ಕಾರ್ಯದಕ್ಷತೆಯುಳ್ಳ ಅಧಿಕಾರಿ ಸಿಬ್ಬಂದಿ ವರ್ಗದವರಿದ್ದಾರೆ.

ಶಿರಾ ಪಟ್ಟಣದಲ್ಲಿರುವ ಈ ಸಂಘದ "ಕನಕ ಸಂಕೀರ್ಣ ಭವನ"ದ ಮಾದರಿಯಲ್ಲಿ ಪಟ್ಟನಾಯಕನಹಳ್ಳಿಯಲ್ಲಿಯೂ ಬಹುಕೋಟಿ ವೆಚ್ಚದ "ಕನಕ ಸಹಕಾರ ಸಂಘ"ವು ತಲೆಯೆತ್ತಿ ನಿಂತಿದೆ.

ಕೋವಿಡ್–19ರ ಸಂದರ್ಭದಲ್ಲಿ ಕೊಟ್ಟ ಸಾಲ ವಸೂಲು ಮಾಡುವುದು ಕಷ್ಟದ ಕೆಲಸವೇ ಸರಿ. ಕಳೆದ ಎರಡು ವರ್ಷಗಳಲ್ಲಿ ಕೋವಿಡ್ ಮಹಾಮಾರಿಯ ಸೋಂಕಿನಿಂದ ಲಾಕ್‌ಡೌನ್ ಸೇರಿದಂತೆ, ಹಲವು ಕಾರಣಗಳಿಂದ ಜನರು ಸಂಕಷ್ಟಕ್ಕೆ ಒಳಗಾಗಿದ್ದರು. ಇಂಥ ಸಂದರ್ಭದಲ್ಲಿ ಸಂಘದ ಆಡಳಿತ ಮಂಡಳಿಯ ತೀರ್ಮಾನಗಳಿಂದ ಸದಸ್ಯರಿಗೆ ಅಗತ್ಯ ಸಾಲ ನೀಡಿ, ಅವರ ಸಂಕಷ್ಟಗಳಿಗೆ ಪರಿಹಾರ ತಾತ್ಕಾಲಿಕ ಪರಿಹಾರ ಒದಗಿಸಿಕೊಡಲಾಗಿತ್ತು. ಸದಸ್ಯರೂ ಕೂಡ ಸಂಘದ ಸಮಾಜಮುಖಿ ಕಾರ್ಯವನ್ನು ಬೆಂಬಲಿಸಿ, ಅಗತ್ಯ ನೆರವು ಪಡೆದು ಸಕಾಲದಲ್ಲಿ ಸಾಲ ಮರುಪಾವತಿ ಮಾಡುತ್ತಿರುವುದು ಸಂಘದ ಬೆಳವಣಿಗೆಗೆ ಕಾರಣವೂ ಆಗಿದೆ. ಪ್ರಸ್ತುತ ಸಂಘದ ಅಧ್ಯಕ್ಷರಾಗಿ ರಂಗನಾಥ್ ದಾಸಪ್ಪ ಅವರು, ಪ್ರಧಾನ ವ್ಯವಸ್ಥಾಪಕರಾದ ಆರ್ ಲಕ್ಷ್ಮಣ್, ಆಡಳಿತ ಮಂಡಳಿಯ ನಿರ್ದೇಶಕರು ತಮ್ಮ ಬದ್ಧತೆಯುಳ್ಳ ಮಾರ್ಗದರ್ಶನದಲ್ಲಿ ಸಂಘವನ್ನು ಪ್ರಗತಿಯ ಪಥದಲ್ಲಿ ಮುನ್ನಡೆಸುತ್ತಿದ್ದಾರೆ. ಈ ಹಿಂದೆ ಅಧ್ಯಕ್ಷರಾಗಿದ್ದ ಆರ್.ಡಿ. ಮಂಜುನಾಥ್ ಅವರ ಮಾರ್ಗದರ್ಶನವೂ ಸಂಘದ ಬೆಳವಣಿಗೆಯಲ್ಲಿ ಸ್ಮರಣೀಯವಾಗಿದೆ.

ವಾರದ ರಜೆ ಹೊರತುಪಡಿಸಿ ಉಳಿದ ರಜೆ ದಿನಗಳಲ್ಲಿಯೂ ಸಿಬ್ಬಂದಿಗಳು ಸ್ವಯಂ ಪ್ರೇರಣೆಯಿಂದ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ವಿಚಾರವಾಗಿದೆ. ಸದಸ್ಯರು, ಗ್ರಾಹಕರ ಅನುಕೂಲಕ್ಕೆ ಇ–ಸ್ಟಾಂಪಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಸದಸ್ಯರು ಇರುವ ಕಡೆಗೆ ಸಂಚಾರಿ ವಾಹನಗಳನ್ನು ಕಳುಹಿಸಿ ಹಣ ಹಿಂಪಡೆಯಲು ಮತ್ತು ಠೇವಣಿ ಸಂಗ್ರಹಿಸಲು ವ್ಯವಸ್ಥೆ ಮಾಡಲಾಗಿದೆ. ಸಾಲ ವಸೂಲಾತಿಯ

ಬಗ್ಗೆ ಸದಸ್ಯರಲ್ಲಿ ನಿರಂತರವಾಗಿ ಅರಿವು ಮೂಡಿಸಲಾಗುತ್ತಿದೆ.

**ಭೇಟಿ ನೀಡಿದ ಪ್ರಮುಖರು :** ಶಿರಾ ಶ್ರೀ ಕನಕ ಪತ್ತಿನ ಸಹಕಾರ ಸಂಘದ ಉತ್ತಮ ಸೇವೆಯನ್ನು ಪರಿಗಣಿಸಿ 2018ರಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯ ಅವರು ಭೇಟಿ ನೀಡಿ ಮೆಚ್ಚುಗೆಯ ಮಾತುಗಳನ್ನಾಡಿ, ಪ್ರೋತ್ಸಾಹಿಸಿ ಬೆನ್ನು ತಟ್ಟಿದ್ದರು. ತುಮಕೂರು ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಕೆ.ಎನ್. ರಾಜಣ್ಣ, ಸಹಕಾರ ರತ್ನ ಪುರಸ್ಕೃತರಾದ ಎನ್.ಆರ್. ಜಗದೀಶ್ ಅವರು ಸೇರಿದಂತೆ ಜಿಲ್ಲೆಯ ಜನಪ್ರತಿನಿಧಿಗಳು, ಸಹಕಾರಿ ಮುಖಂಡರು ಸಂಘದ ಕಾರ್ಯವನ್ನು ಶ್ಲಾಘಿಸಿದ್ದಾರೆ.

**ಗುಂಪು ವಿಮೆ ಸೌಲಭ್ಯ :** ಸಂಘವು ತನ್ನ ಸದಸ್ಯರಿಗೆ ಗುಂಪು ವಿಮೆ ಸೌಲಭ್ಯವನ್ನು ಒದಗಿಸಿಕೊಟ್ಟಿದೆ. ಯಾವುದೇ ಸದಸ್ಯ ಅಕಾಲಿಕ ಮರಣ ಹೊಂದಿದರೆ, ಅಂಥವರ ವಾರಸುದಾರರಿಗೆ 2 ಲಕ್ಷ ರೂ.ಗಳ ಪರಿಹಾರವನ್ನು ಸಂಬಂಧಿಸಿದ ವಿಮಾ ಕಂಪನಿಯಿಂದ ಪಡೆಯ ಬಹುದಾಗಿದೆ. ವಿಶೇಷವಾಗಿ ಸಂಘದ ಸಿಬ್ಬಂದಿ ವರ್ಗದವರಿಗೆ ತಲಾ 5 ಲಕ್ಷ ರೂ.ಗಳ ಆರೋಗ್ಯ ವಿಮೆಯನ್ನು ಸಂಘವು ಒದಗಿಸಿದೆ.

**ಪ್ರಶಸ್ತಿಗಳು :** ಶ್ರೀ ಕನಕ ಪತ್ತಿನ ಸಹಕಾರ ಸಂಘವು ವಿವಿಧ ಸಂಸ್ಥೆಗಳಿಂದ ಹಾಗೂ ಸಹಕಾರ ಸಪ್ತಾಹದ ಸಂದರ್ಭದಲ್ಲಿ 2016–17, 17–18, 18–19ನೇ ಸಾಲಿನಲ್ಲಿ ಉತ್ತಮ ಸಹಕಾರ ಸಂಘವೆಂದು ಹಲವು ಪ್ರಶಸ್ತಿಗಳಿಗೆ ಬಾಜನವಾಗಿದೆ.

**ಪ್ರತಿಭಾ ಪುರಸ್ಕಾರ :** ಸಂಘವು ಪ್ರತಿವರ್ಷ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸುತ್ತಿದೆ.

**ಸಾಮಾಜಿಕ ಕಳಕಳಿ :** ಉತ್ತರಕನ್ನಡ, ಕೊಡಗು ನೆರೆಹಾಳಿ ಸಂಬಂಧ ಮುಖ್ಯಮಂತ್ರಿ ಪರಿಹಾರ ನಿಧಿಗೆ ದೇಣಿಗೆ ನೀಡಲಾಗಿದೆ. ಕೊರೋನಾ ಮಹಾಮಾರಿ ಸೋಂಕು ನಿಯಂತ್ರಣಕ್ಕೆ ಪೂರಕವಾಗಿ ಸಂಘದ ವತಿಯಿಂದ ತಲಾ ಒಂದು ಲಕ್ಷ ರೂ. ವೆಚ್ಚದ ಎರಡು ಕಾನ್ಸಂಟ್ರೇಟರ್‌ಗಳನ್ನು ನೀಡಿ ಸಾಮಾಜಿಕ ಕಳಕಳಿ ತೋರಿದೆ.

**ಶಾಖೆಗಳು :** ಕೇಂದ್ರ ಕಚೇರಿ ಶಾಖೆ, ತೋವಿನಕೆರೆ, ಬ್ರಹ್ಮಸಂದ್ರ, ಬುಕ್ಕಾಪಟ್ಟಣ, ಬರಗೂರು, ಕೊರಟಗೆರೆ, ಪಟ್ಟನಾಯಕನಹಳ್ಳಿ

**– ಎಂ. ಮಹೇಶ್‌ಕುಮಾರ್**





ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ. ಕೆ.ಲಲಿತ ಜಿ.ಟಿ.ದೇವೇಗೌಡ ಹಾಗೂ ನಿರ್ದೇಶಕರುಗಳಾದ ಡಾ ಸಂಜಯ ಪಿ ಹೊಸಮಠ, ಶ್ರೀ ಡಿ.ಚನ್ನಯ್ಯ, ಶ್ರೀ ಕೆ.ಕೃಷ್ಣಮೂರ್ತಿ, ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡ, ಶ್ರೀ ಹೊನ್ನಯ್ಯ ವಿ ಹಿರೇಮಠ, ಶ್ರೀ ಧರೇಪ್ಪ ಮಹದೇವ ಆಲಗೂರ, ಶ್ರೀ ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ ರವರುಗಳು ಮಹಾಮಂಡಳದ ನಿವೇಶನದಲ್ಲಿ ನಡೆಯುತ್ತಿರುವ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಿದರು.

# ಸಂಕ್ರಾಂತಿ ಹಬ್ಬ ಮತ್ತು ಪ್ರಕೃತಿ ಮಾತೆಯ ಪೂಜೆ

ಸಂಕ್ರಾಂತಿ ಹಬ್ಬ ನಿಸರ್ಗದ ಹಬ್ಬ. ಮಾನವ ಹಾಗೂ ಪಶು, ಪಕ್ಷಿ, ಜಲಚರಗಳ, ಎಲ್ಲಾ ಬಯಕೆ ಹಾಗೂ ಅಗತ್ಯಗಳನ್ನು ಪೂರೈಸುವ ಪ್ರಕೃತಿ ಮಾತೆಗೆ ಪೂಜೆ ಸಲ್ಲಿಸುವುದೆ ಸಂಕ್ರಾಂತಿ ಹಬ್ಬದ ಮುಖ್ಯ ಆಶಯ. ಸಂಕ್ರಾತಿ ಹಬ್ಬದಂದು ಸೂರ್ಯ ತನ್ನ ಪಥ ಬದಲಾಯಿಸವುದು ಪ್ರಕೃತಿಯಲ್ಲಿ ನಡೆಯುವ ಪ್ರಮುಖ ಘಟನೆಯಾಗಿದೆ.

ಇನ್ನೊಂದು ಕಡೆ ಸಂಕ್ರಾಂತಿ ಹಬ್ಬವನ್ನು ಎಳ್ಳು-ಬೆಲ್ಲದ ಹಬ್ಬ ಎನ್ನುತ್ತಾರೆ. ರೈತರು ತಾವು ಬೆಳೆದ ಬೆಳೆಗಳನ್ನು ರಾಶಿ ರಾಶಿಯಾಗಿ ಹಾಕಿ ಅದಕ್ಕೆ ಪೂಜೆ ಮಾಡುತ್ತಾರೆ. ಈ ಕಾರಣಕ್ಕಾಗಿ ಸುಗ್ಗಿಯ ಹಬ್ಬ ಎನ್ನುತ್ತಾರೆ. ಸಂಕ್ರಾಂತಿಯ ಹಬ್ಬದ ದಿನ ಎಳ್ಳು ದಾನ ಮಾಡಬೇಕು ಎಂಬ ನಿಯಮವಿದೆ. ಎಳ್ಳು ಶನಿ ಗ್ರಹದ ಪ್ರತಿನಿಧಿ ಹಾಗೂ ಆತನ ಧಾನ್ಯವಾಗಿದೆ. (ಶನಿಗ್ರಹ ಎಂದೊಡನೆ ಎಲ್ಲರಿಗೂ ಏನೋ ಒಂದು ರೀತಿ ಭಯ) ಎಳ್ಳನ್ನು ನಾವು ದಾನ ಮಾಡಲು ಹೋದಾಗ ಸಾಮಾನ್ಯವಾಗಿ ಅದನ್ನು ತೆಗೆದುಕೊಳ್ಳಲು ಇಷ್ಟ ಪಡುವುದಿಲ್ಲ. ಕಾರಣ ಅವರ ಪಾಪ ನಾವು ತೆಗೆದುಕೊಂಡ ಹಾಗೆ ಎಂದು ಹಾಗೂ ದೋಷ ಉಂಟಾಗುವುದು ಎಂದು. ಆದ್ದರಿಂದ ಈ ಕಾರಣದಿಂದ ಎಳ್ಳಿನ ಜತೆಯಲ್ಲಿ ಬೆಲ್ಲ, ಕಡಲೆಬೀಜ, ಕೊಬ್ಬರಿಯನ್ನು ಮಿಶ್ರಣ ಮಾಡಿ ದಾನ ಮಾಡುವ ಪದ್ಧತಿ ಪ್ರಾರಂಭವಾಯಿತು. ಅಲ್ಲದೆ ಆ ಬೆಳೆಗಳು ಆಗ ತಾನೆ ಬೆಳೆದು ಮಾರುಕಟ್ಟೆಗೆ ಬಂದಿರುತ್ತದೆ. ಅವುಗಳನ್ನು ಪೂಜೆ ಮಾಡಿ ದಾನ ಧರ್ಮ ಮಾಡಿದರೆ ಇನ್ನು ಫಲ ಹೆಚ್ಚು ಬರುವುದು ಎಂಬ ನಂಬಿಕೆಯೂ ಇದೆ.



ವೈಜ್ಞಾನಿಕ ರೀತಿಯಲ್ಲಿ ನೋಡಿದಾಗ ಸಂಕ್ರಾಂತಿಯ ಸಮಯದಲ್ಲಿ ಚಳಿ ಹೆಚ್ಚು ಇರುತ್ತದೆ. ಎಳ್ಳು ಸೇವನೆಯಿಂದ ದೇಹದ ಉಷ್ಣತೆ ಹೆಚ್ಚು ಆಗುತ್ತದೆ ಹಾಗೂ ಚರ್ಮದ ಕಾಂತಿಯೂ ಹೆಚ್ಚುತ್ತದೆ. ಈ ಹಬ್ಬವು ಅತ್ಯಂತ ಪ್ರಾಚೀನ ಕಾಲದಿಂದಲೂ ಆಚರಣೆಗೆ ಬಂದಿದೆ. ಜನಪದ ಗೀತೆಯಲ್ಲೂ ಸಂಕ್ರಾಂತಿಯ ಬಗ್ಗೆ ಹೇಳಿದೆ. ಶಿವ ಮತ್ತು ಪಾರ್ವತಿಯರು ಲೋಕ ಸಂಚಾರ ಪ್ರಾರಂಭಿಸುತ್ತಾರಂತೆ. ಈ ಸಂಕ್ರಮಣದ ಕಾಲದ ಗೋಧೂಳಿ ಲಗ್ನಕ್ಕಿಂತ ಹೆಚ್ಚು ಸಮಯ ಈ ಭೂಲೋಕದಲ್ಲಿರುತ್ತಾರೆ ಎಂದು ಪುರಾಣದಲ್ಲಿ ಇದೆ. ಈ ಪುಣ್ಯ ದಿನದಲ್ಲಿ ಹಲವಾರು ದೇವತೆಗಳಿಗೆ ಶಾಪ ವಿಮೋಚನೆ ಉಂಟಾಗಿದೆ. ಉದಾಹರಣೆಗೆ ಇಂದ್ರ ಮತ್ತು ಚಿತ್ರಸೇನ.

ಪ್ರತಿ ವರ್ಷ ಸಂಕ್ರಾಂತಿಯ ಹಬ್ಬದ ದಿನ ಸಂಜೆ ಶಬರಿ ಮಲೆಯಲ್ಲಿ ಅಯ್ಯಪ್ಪ ಸ್ವಾಮಿಯು ಜ್ಯೋತಿ ರೂಪದಲ್ಲಿ ದರ್ಶನ ನೀಡುತ್ತಾನೆ ಎಂಬ ನಂಬಿಕೆ ಇದೆ. ಗ್ರಾಮೀಣ ಪ್ರದೇಶದಲ್ಲಿ ರೈತರು ಆ ದಿನ ಎತ್ತುಗಳಿಗೆ ಪೂಜೆ ಸಲ್ಲಿಸಿ ಕಿಚ್ಚು ಹಾಯಿಸುತ್ತಾರೆ. ಭಾರತದ ವಿವಿಧ ರಾಜ್ಯಗಳಲ್ಲಿ ಸಂಕ್ರಾತಿ ಹಬ್ಬ ವನ್ನು ವಿಭಿನ್ನ ಹೆಸರಿನಿಂದ ಆಚರಿಸಿ ಪ್ರಕೃತಿ ಮಾತೆಗೆ ಪೂಜಿಸುತ್ತಾರೆ. ಅದೇ ಪ್ರಕಾರ ಹೊರ ದೇಶದಲ್ಲೂ ವಿಭಿನ್ನ ರೀತಿಯಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ.

ಸಂಕ್ರಾಂತಿ ಹಬ್ಬದ ದಿನದಂದು ಎಳ್ಳು ಬೆಲ್ಲ (ಸಕ್ಕರೆ) ನೆಲಗಡಲೆ, ಸಕ್ಕರೆ ಅಚ್ಚು, ಕೊಬ್ಬರಿ, ಕಬ್ಬು ಬೆರೆಸಿದ ವಿಶೇಷ ಸಿಹಿಯನ್ನು ದೇವರಿಗೆ ನೈವೇದ್ಯ ಮಾಡಿ ನಂತರ ವಿವಾಹಿತ ಹಾಗೂ ಅವಿವಾಹಿತ ಹೆಣ್ಣು ಮಕ್ಕಳು ತಮ್ಮ ಆಪ್ತರೇಷ್ಟರಿಗೆ ಹಂಚಿ ಸಂತೋಷವನ್ನು ಪಡುತ್ತಾರೆ. ಈ ದಿನ ಶ್ರೀರಾಮನ ಪೂಜೆಯನ್ನು ಆಂಧ್ರಪ್ರದೇಶದಲ್ಲಿ ಮಾಡುತ್ತಾರೆ. ತಮಿಳುನಾಡಿನಲ್ಲಿ ಪೊಂಗಲ್ ಹೆಸರಿನಲ್ಲಿ ಸಂಕ್ರಾಂತಿ ಹಬ್ಬ ಅತ್ಯಂತ ಸಡಗರ, ಸಂಭ್ರಮದಿಂದ ಆಚರಿಸಲಾಗುತ್ತದೆ. ಪೊಂಗಲ್‌ಹಬ್ಬಕ್ಕೆ ಬೆಲ್ಲ, ಅಕ್ಕಿ, ತುಪ್ಪದಿಂದ ತಯಾರಿಸಿದ ಪೊಂಗಲನ್ನು (ಅಕ್ಕಿಯ ಪಾಯಸ) ಸುತ್ತಲೂ ಕಬ್ಬನ್ನು ಕಟ್ಟಿ ಸಿಂಗರಿಸಿದ ಒಲೆಯಲ್ಲಿ ಮಾಡಿ ಹಬ್ಬವನ್ನು ಆಚರಿಸುತ್ತಾರೆ. ರೈತರು ಈ ದಿನದಂದು ಹಸುಗಳಿಗೆ ಮೈತೊಳೆದು, ಸಿಂಗರಿಸಿ ಮೆರವಣಿಗೆ ಮಾಡಿ, ಸಂಜೆ ಊರ ಒಂದು ಬೀದಿಯ ದಾರಿಯಲ್ಲಿ ಕಿಚ್ಚು ಹಾಯಿಸುತ್ತಾರೆ. ಎಳ್ಳಿನ ಹಬ್ಬವೆಂದು ಪ್ರಸಿದ್ಧವಾದ ಈ ದಿನದಂದು, ನಾನಾ ರೂಪಗಳಲ್ಲಿ ಎಳ್ಳನ್ನು ಬಳಸುವುದಲ್ಲದೆ, ಪೀಡಾ ಪರಿಹಾರಾರ್ಥವಾಗಿ ಎಳ್ಳನ್ನು ಹಾಗೂ ಎಳಚಿ ಹಣ್ಣನ್ನು ಸುರಿಯುತ್ತಾರೆ. ಪುರಾಣಗಳ ಪ್ರಕಾರ ಈ ದಿನದಿಂದ ದೇವತೆಗಳಿಗೆ ಹಗಲು, ರಾಕ್ಷಸರಿಗೆ ರಾತ್ರಿಯಾಗುವುದರಿಂದ ಆನಂದಕ್ಕಾಗಿ ಎಳ್ಳು ಬೆಲ್ಲ ತಿಂದು ಒಳ್ಳೆಯ ಹಿತ ನುಡಿಯುವ ಉದ್ದೇಶದಿಂದಾಗಿ ಎಳ್ಳು ಬೆಲ್ಲ ಹಂಚುವರು. ಜನಪದದಲ್ಲಿ ಸುಗ್ಗಿ ಹಬ್ಬವೆಂದೇ ಆಚರಿಸುವ ಸಂಕ್ರಾಂತಿಯ ಬಗ್ಗೆ ಹಲವಾರು ಹಾಡುಗಳನ್ನು ಕಟ್ಟಿ ಹಾಡಿರುವುದನ್ನು ಕಾಣಬಹುದು. ಉದಾಹರಣೆಗೆ ನೋಡುವುದಾದರೆ,

"ಸುಗ್ಗಿಯು ಬಂದಿತು
ಹಿಗ್ಗನು ತಂದಿತು
ನಮ್ಮಯ ನಾಡಿನ ಜನಕೆಲ್ಲ".

ನಮ್ಮ ದೇಶದಲ್ಲಿ ಆಚರಿಸಲ್ಪಡುವ ಪ್ರತಿಯೊಂದು ಧರ್ಮದ ಹಬ್ಬಕ್ಕೂ ತನ್ನದೇ ಆದ ಐತಿಹಾಸಿಕ, ಪೌರಾಣಿಕ, ವೈಜ್ಞಾನಿಕ ಮಹತ್ವಗಳಿವೆ. ಆದರೆ ಇತ್ತೀಚಿನ ಒತ್ತಡದ ಜೀವನದಲ್ಲಿ ಹಬ್ಬಗಳ ಆಚರಣೆಯೇ ಕಣ್ಮರೆಯಾಗುತ್ತಿರುವುದು ವಿಪರ್ಯಾಸ. ನಮ್ಮ ಇಂದಿನ ಪೀಳಿಗೆಯವರಿಗೆ ಪಾಶ್ಚಾತ್ಯೀಕರಣದ ಪ್ರಭಾವದಿಂದ ನಮ್ಮ ಸಂಸ್ಕೃತಿಕ ದ್ಯೋತಕವಾದ ಹಬ್ಬಗಳು ಯಾವುದು ಎಂಬುದೇ ತಿಳಿಯದಂತಾಗಿದೆ. ಹೀಗಾಗಿ ಅನುಕರಣೆಯ ಜಾಡ್ಯವನ್ನು ತೊರೆದು ಪರಂಪರಾಗತವಾಗಿ ಆಚರಣೆಗೆ ಒಳಪಟ್ಟ ಹಬ್ಬ ಹರಿದಿನಗಳನ್ನು ಹಿರಿಯರು ಆಚರಿಸುತ್ತಾ ಮಕ್ಕಳಿಗೂ ಅದರ ಮಹತ್ವ, ಹಿನ್ನೆಲೆ ಬಗ್ಗೆ ತಿಳಿಸಿ, ಅದು ಮುಂದಿನ ಪೀಳಿಗೆಯವರೆಗೆ ಮುಂದುವರಿಯುವಂತೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು.

**ಮಂಜುನಾಥ್ ನಾಯ್ಕ್**
ಹಿರಿಯ ಪತ್ರಕರ್ತರು, ಬೆಂಗಳೂರು.

## ಮರೆಯಲಾಗದ ಮಹಾಪುರುಷ

# ಸಹಕಾರ ರತ್ನ ಬಿ.ಎಲ್. ಲಕ್ಕೇಗೌಡ



ಎಂ.ಜಿ. ನರೇಂದ್ರಕುಮಾರ
ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ. ಬೆಂಗಳೂರು

ಸುಮಾರು 20 ವರ್ಷಗಳ ಕಾಲ ಬಿ.ಎಲ್.ಲಕ್ಕೇಗೌಡರ ಅಭಿಮಾನಿಯಾಗಿ, ಸಹಕಾರಿ ಕ್ಷೇತ್ರದಲ್ಲಿ ನಿಷ್ಠೆ, ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸುವ ಅವಕಾಶ ನನಗೆ ಸಿಕ್ಕಿತ್ತು. ನಾನು ಬೆಂಗಳೂರು ಯಶವಂತಪುರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ತೊಡಗಿಸಿಕೊಂಡು, ಅಲ್ಲೂ ಪ್ರಸ್ತುತ ನಿರ್ದೇಶಕನಾಗಿ, ಹಿಂದೆ ಅಧ್ಯಕ್ಷನಾಗಿ ಸೇವೆ ಸಲ್ಲಿಸಿದ ನನಗೆ, ನಮ್ಮ ತಂದೆ ಎಂ.ಜಯರಾಮೇಗೌಡರ ನಿರಂತರ ಸಹಕಾರ ಒಡನಾಟ ಇದ್ದರೂ ಅವರ ಪ್ರಭಾವದಲ್ಲಿ ಬೆಳೆದ ನನಗೆ ಬಿ.ಎಲ್.ಲಕ್ಕೇಗೌಡರು ಆಕರ್ಷಕ ವ್ಯಕ್ತಿಯಾಗಿ ಕಂಡರು. ಅವರೊಂದಿಗೆ ಮಾತನಾಡುವುದು, ಸಹಕಾರ ಕ್ಷೇತ್ರದಲ್ಲಿ ಏನೆಲ್ಲ ಸಾಧನೆ ಮಾಡಬಹುದು. ಅದರಲ್ಲಿ ಪಾರದರ್ಶಕತೆ ಇದ್ದರೆ ಅದರ ಯಶೋಗಾಥೆ ಯಾವ ರೀತಿ ಎಂಬುದನ್ನು ಅವರಿಂದ ತಿಳಿದ ನಾನು ಅವರ ಮಾರ್ಗದರ್ಶನದಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.,ಬೆಂಗಳೂರು ಎಂಬ ಉನ್ನತ ಸಹಕಾರಿ ಸಂಸ್ಥೆಯನ್ನು ಸೇರಲು ನನಗೆ ಮಾರ್ಗದರ್ಶಕರಾದರು. ಎಡೆಬಿಡದ ಅವರ ಸಂಪರ್ಕ, ಸಲಹೆ ಅವರ ಪ್ರಭಾವದಿಂದ ಮಹಾಮಂಡಳ ಉನ್ನತವಾಗಿ ಬೆಳೆಯಲು ಕಾರಣವಾಯಿತು.

ಇಂತಹ ವ್ಯಕ್ತಿ ಕಳೆದುಕೊಳ್ಳುವುದು ಬಹಳ ನೋವಿನ ಸಂಗತಿ. ಬಿ.ಎಲ್.ಲಕ್ಕೇಗೌಡರು ನವೆಂಬರ್ 29, 2021ರಂದು ನಿಧನರಾದರು. ನನ್ನದುರಾದೃಷ್ಟ ಸಹಕಾರಿ ಧುರೀಣರಾಗಿದ್ದ ನನ್ನ ತಂದೆ ಈ ಕ್ಷೇತ್ರದಲ್ಲಿ 52 ವರ್ಷ ಸೇವೆ ಸಲ್ಲಿಸಿದ್ದ ಎಂ.ಜಯರಾಮೇಗೌಡರ ಸಾವು ಇದೇ ಡಿಸೆಂಬರ್ 4, 2021 ರಂದು ನಡೆದೇ ಹೋಯಿತು. ಈ ರೀತಿ ಎರಡು ಸಾವುಗಳು ನನ್ನನ್ನುತೀವ್ರವಾಗಿ ಬಾಧಿಸಿತು. ಈಗ ನಮ್ಮ ಮುಂದಿರುವ ಗುರಿ ಇವರಂತೆ ಇವರುಗಳು ತೋರಿದ ದಾರಿಯಲ್ಲಿ ಸಾಗುವುದು ಮಾತ್ರ. ಈ ಲೇಖನ ಬರೆಯುವಾಗ ವಿಷಾದ, ತೀವ್ರತರ ನೋವು ಕಾಡಿದೆ. ಬಿ.ಎಲ್.ಲಕ್ಕೇಗೌಡರ ಧೀರ್ಘಕಾಲದ ಸೇವೆ, ಅವರಲ್ಲಿದ್ದ ಪ್ರಾಮಾಣಿಕತೆ ನಮ್ಮನ್ನು ಈ ಸಹಕಾರಿ ಕ್ಷೇತ್ರವನ್ನು ಸದಾ ಎಚ್ಚರಿಸುವಂತೆ ನಮ್ಮನ್ನು ಆವರಿಸಿದೆ.


ಇವರು ಮಾಗಡಿ ತಾಲ್ಲೂಕಿನ ಕುಗ್ರಾಮ ಬೆಳಗವಾಡಿಯವರು. ತಂದೆ ಲಕ್ಕಪ್ಪಗೌಡ, ತಾಯಿ ಲಿಂಗಮ್ಮ. ಇದು ಮಾಗಡಿ ತಾಲ್ಲೂಕಿನ ವ್ಯಾಪ್ತಿಗೆ ಸೇರಿದ ಗಂಡುಮೆಟ್ಟಿನ ಕೆಂಪೇಗೌಡರ ನಾಡನ್ನು ಒಳಗೊಂಡ ಪ್ರದೇಶ. ಇಂತಹ ಈ ಕುಗ್ರಾಮದಲ್ಲಿ ಅರಳಿದ ಕಮಲ, ಬೆಳದುಬಂದ ಚೇತನ, ಕಷ್ಟಪಟ್ಟು ಓದಿ ಕೆ.ಎ.ಎಸ್ ಅಧಿಕಾರಿಯಾಗಿ ವಿಶೇಷ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದು ಮಾತ್ರವಲ್ಲ, ಇವರು ಸೇವೆ ಸಲ್ಲಿಸಿದ ಸ್ಥಳಗಳಲ್ಲಿ ಹೆಸರು ಮಾಡಿದವರು. ರಾಜಧಾನಿ ಬೆಂಗಳೂರು ಹಾಗೂ ಸುತ್ತಮುತ್ತ ತಾಲ್ಲೂಕುಗಳಲ್ಲಿ ಸಹಕಾರಿ ಕ್ಷೇತ್ರಗಳನ್ನು ಹುಟ್ಟುಹಾಕಿದ ಧೀಮಂತ. ಗೌಡರು ಬೆಂಗಳೂರು, ಹಾಸನ, ಮಂಡ್ಯ, ಕೋಲಾರ ಜಿಲ್ಲೆಗಳಲ್ಲಿ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಬೆಳವಣಿಗೆಗೆ, ಅಭಿವೃದ್ಧಿಗೆ ಶ್ರಮಿಸಿದವರು.

ಯಾವುದೇ ಸಂಘ ಸಂಸ್ಥೆಗಳು ಉನ್ನತವಾಗಿ ಬೆಳೆಯಬೇಕಾದರೆ ಅಲ್ಲಿ ಇರಬೇಕಾದದ್ದು ಶಿಸ್ತು ಮತ್ತು ಪಾರದರ್ಶಕತೆ ಆಡಳಿತ ಇದನ್ನು ಎಲ್ಲಾ ಸಹಕಾರಿ ಸಂಸ್ಥೆಗಳಲ್ಲಿ ತಂದ ವ್ಯಕ್ತಿ. ಸ್ವತಃ ಬಿ.ಎಲ್.ಲಕ್ಕೇಗೌಡರೇ ಶಿಸ್ತಿನ ಸಿಪಾಯಿ ಎಂದೇ ಹೆಸರು ಮಾಡಿದ್ದವರು. ಶಿಸ್ತು ಸಮಯಪಾಲನೆ ಯಿಂದ ಎಲ್ಲಾ ಸಂಘಗಳಿಗೂ ಖಾಯಂ ಆಹ್ವಾನಿತರಾಗಿ ಹಾಜರಾಗುತ್ತಿದ್ದ ಬಿ.ಎಲ್. ಲಕ್ಕೇಗೌಡರು ಸಭೆಗೆ ಬರುವ ಮುನ್ನ ಪೂರ್ವ ಸಿದ್ದತೆ ಮಾಡಿಕೊಂಡೆ ಹಾಜರಾಗುತ್ತಿದ್ದರು. ನಾನು ಅವರಜೊತೆ ಒಡನಾಡಿಯಾಗಿ ರಾಜ್ಯ ಪತ್ತಿನ ಮಹಾಮಂಡಳದ ಸದಸ್ಯತ್ವ ವಿಸ್ತರಿಸಲು ಹೊರಟಾಗ ನನಗೆ ವಿಸ್ಮಯ ಕಾಣುತ್ತಿತ್ತು. ತಮ್ಮ ಬಿ.ಇಎಸ್ ವಿದ್ಯಾ ಸಂಸ್ಥೆಯ ವಾಹನದಲ್ಲಿ ಬಹುತೇಕ ಜಿಲ್ಲೆಗಳಿಗೆ ಭೇಟಿಕೊಟ್ಟು ಅಲ್ಲಿನ ಪತ್ತಿನ ಸಹಕಾರ ಸಂಘಗಳೊಂದಿಗೆ ಚರ್ಚಿಸಿ ಸದಸ್ಯರನ್ನಾಗಿ ಮಾಡಿ ಈ ಮಹಾಮಂಡಳದಿಂದ ಪತ್ತಿನ ಸಹಕಾರ ಸಂಘಗಳಿಗೆ ಏನೆಲ್ಲಾ ಸಹಾಯ ದೊರೆಯುತ್ತದೆ ಎಂದು ಹೇಳುತ್ತಿದ್ದರು. ಅದರಂತೆ ನಾವು ಭೇಟಿಕೊಟ್ಟ ಬಹುತೇಕ ಪತ್ತಿನ ಸಹಕಾರಿ ಸಂಘಗಳು ಸದಸ್ಯರಾದರು. ಪ್ರವಾಸದ ಸಮಯದಲ್ಲಿ ಅಲ್ಲಿನ ಪ್ರದೇಶಗಳ ಇತಿಹಾಸ, ಅಲ್ಲಿನ ಗಣ್ಯವ್ಯಕ್ತಿಗಳ ಬಗ್ಗೆ ವಿವರಿಸುತ್ತಿದ್ದರು. ಇವರಿಗೆ ಅಪಾರವಾದ ಜ್ಞಾಪಕ ಶಕ್ತಿ ಇತ್ತು. ಸದಸ್ಯತ್ವ ಪಡೆದ ಸಹಕಾರ ಸಂಘಗಳು ಇ–ಸ್ಟಾಂಪ್ ಸೌಲಭ್ಯಗಳನ್ನು ಈ ಮಹಾಮಂಡಳದಿಂದ ಪಡೆಯುವಂತೆ ಆಯಿತು. ಅಲ್ಲದೇ ದಿ ಭಾರತಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಜಯನಗರ ಈ ಸಂಸ್ಥೆಯಲ್ಲಿ ಪತ್ತಿನ ಮಹಾಮಂಡಳಕ್ಕೆ ಉಚಿತವಾಗಿ 10 ವರ್ಷಗಳ

ಕಾಲ ಸ್ಥಳಾವಕಾಶ ಕಲ್ಪಿಸಿಕೊಟ್ಟಿದ್ದರು. ಮಹಾಮಂಡಳ ಬೆಂಗಳೂರಿನಲ್ಲಿ ಇಷ್ಟೊಂದು ಸದೃಡವಾಗಿ ಬೆಳದು ಬರಲು ಕಾರಣವಾಯಿತು. ಒಬ್ಬ ಮುಖ್ಯ ಪ್ರವರ್ತಕರಾಗಿ, ಅಧ್ಯಕ್ಷರಾಗಿ ಏನೆಲ್ಲ ಮಾಡಬಹುದೆಂದು ಬಿ.ಎಲ್.ಲಕ್ಕೇಗೌಡರು ತೋರಿಸಿಕೊಟ್ಟ ಸಹಕಾರಿ ಚೇತನ. ಈ ಮಹಾಮಂಡಳದಂತೆ ಇವರ ಎಲ್ಲಾ ಸಹಕಾರಿ ಸಂಸ್ಥೆಗಳು ಇಂತಹ ಶಿಸ್ತು, ಪಾರದರ್ಶಕತೆ ಆಡಳಿತ ಉಳಿಸಿಕೊಂಡು ಬೆಳೆದು ಬಂದಿದೆ.

ಸಮಾನ ಮನಸ್ಕರ ಒಕ್ಕೂಟವು ಶ್ರೀ ಎಸ್.ಟಿ. ಸೋಮಶೇಖರ್ (ಹಾಲಿ ಸಹಕಾರ ಸಚಿವರು) ಇವರ ಅಧ್ಯಕ್ಷತೆಯಲ್ಲಿ 1996ರಲ್ಲಿ ಸ್ಥಾಪನೆಯಾಯಿತು. ಇದಕ್ಕೆ ಬಿ.ಎಲ್. ಲಕ್ಕೇಗೌಡರು ಮಾರ್ಗದರ್ಶಕರಾಗಿ ಈ ಒಕ್ಕೂಟದ ಮೂಲಕ ಸಮಾಜಸೇವೆ ಕೆಲಸಗಳು ನಡೆಯುವಂತಹ ಅವರ ಸಲಹೆ ಮರೆಯುವಂತಹುದಲ್ಲ. ಈ ಸಮಾನ ಮನಸ್ಕರ ಒಕ್ಕೂಟ ಸಾಮೂಹಿಕ ವಿವಾಹಗಳಿಗೆ ಮಾತ್ರ ಸೀಮಿತವಾಗದೆ ಬಡ ಶಾಲಾ ಮಕ್ಕಳಿಗೆ ಪುಸ್ತಕ ಲೇಖನ ಸಾಮಾಗ್ರಿಗಳ ವಿತರಣೆ, ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಶಿಬಿರ. ಅದರಂತೆ ಒಕ್ಕೂಟದಎಲ್ಲ ಸದಸ್ಯರ ಅಪೇಕ್ಷೆಯಂತೆ, "ಶ್ರೀ ಬಿ.ಎಲ್.ಲಕ್ಕೇಗೌಡ ಪ್ರಶಸ್ತಿ" ಇದನ್ನು ಶಿಕ್ಷಣ, ಸಹಕಾರ ಸಮಾಜಸೇವೆಯಲ್ಲಿ ಹೆಸರು ಮಾಡಿದವರಿಗೆ ಮಾತ್ರ ನೀಡುವ ಪ್ರಶಸ್ತಿಯಾಗಿ ರೂಪುಗೊಂಡು ಸಮಾಜದಗಣ್ಯರಿಗೆ ಪ್ರಶಸ್ತಿ ನೀಡಿ ಅಭಿನಂದಿಸಿ, ಗೌರವಿಸುವ ಕೆಲಸ ನಡೆಯಿತು. ಈ ನಿಟ್ಟಿನಲ್ಲಿ ಬಿ.ಎಲ್.ಲಕ್ಕೇಗೌಡರ ಬಗ್ಗೆ ಏಕೆ ಒಂದು ಅಭಿನಂದನಾ ಕೃತಿ ತಂದು ಸಾರ್ವಜನಿಕವಾಗಿ ಗೌರವಿಸಬಾರದು ಎಂಬ ಚಿಂತನೆ ಶ್ರೀ ಎಸ್.ಟಿ. ಸೋಮಶೇಖರ್‌ರವರಲ್ಲಿ ಹಾಗೂ ಒಕ್ಕೂಟದ ಸದಸ್ಯರಲ್ಲಿ ಒಕ್ಕೊರಲಿನಿಂದ ಮೂಡಿ ಬಂದಾಗ ಶ್ರೀ ಬಿ.ಎಲ್.ಲಕ್ಕೇಗೌಡರಿಗೆ 1997ರಲ್ಲಿ "ಕರ್ಮಯೋಗಿ" ಎಂಬ ಅಭಿನಂದನಾ ಕೃತಿ ಹೊರತಂದು ಅವರನ್ನು ಅರ್ಥಪೂರ್ಣವಾಗಿ ಸನ್ಮಾನಿಸಿದ್ದು ಒಕ್ಕೂಟದ ಹೆಗ್ಗಳಿಕೆ ಎಂದೇ ಹೇಳಬಹುದು.

ರೈತಾಪಿ ಕುಟುಂಬದ ಮಗನಾಗಿ ಹುಟ್ಟಿ ಬೆಳೆದು ಸಾಧಿಸಿದ ಮಹಾನ್ ಚೇತನ. 88 ವರ್ಷ ವಯಸ್ಸು, ಅನಾರೋಗ್ಯ ಸಹಜ, ಮಗಳ, ಪತ್ನಿಯ ಪ್ರೀತಿಯ ಜೀವ, ಸಹಸ್ರಾರು ಅಭಿಮಾನಿಗಳ ಬಂಧುಗಳು ಇವರ ಬಗ್ಗೆ ಹೇಳುತ್ತಲೇ ಹೋಗಬಹುದು. ಅಂತಹ ಈ ಮಹಾಪುರುಷ ನಮ್ಮಿಂದ ದೂರವಾದದ್ದು ಬಹಳ ನೋವು ತಂದ ಸಂಗತಿ. ಅವರ ಕುಟುಂಬದವರಿಗೆ ಈ ನೋವು ತಡೆದುಕೊಳ್ಳುವ ಶಕ್ತಿ ಬರಲಿ ನಾವು ಅವರೊಂದಿಗೆ ಇರುತ್ತೇವೆಂದು ಹೇಳಿ ನಮಿಸುತ್ತೇನೆ.




ಈ ಲೇಖನದಲ್ಲಿ ಎಲ್ಲವನ್ನು ದಾಖಲೆ ಮಾಡಲಾಗದಿದ್ದರೂ ಕೆಲವು ಪ್ರಮುಖ ಸಂಘ ಸಂಸ್ಥೆಗಳನ್ನು ಹೇಳಲೇಬೇಕು. ಅದರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಿ, ಸಾವಿರಾರು ಜನರಿಗೆ ಉದ್ಯೋಗ, ನೂರಾರು ವ್ಯಕ್ತಿಗಳನ್ನು ಸಹಕಾರಿಗಳಾಗಿ ರೂಪಿಸಿದ ಸಂಸ್ಥೆಗಳು ಇಂತಿವೆ.

1) ಭಾರತ್ ವಿದ್ಯಾ ಸಂಸ್ಥೆ
2) ಭಾರತ್ ಗೃಹ ನಿರ್ಮಾಣ ಸಹಕಾರ ಸಂಘ
3) ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್
4) ದಿ ಭಾರತಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.,
5) ಬೆಂಗಳೂರು ಕೆಂಪೇಗೌಡ ಕೇಂದ್ರ ಸಮಿತಿ
6)ಸಮಾಜ ಸಂಪರ್ಕ ವೇದಿಕೆ
7) ಬೆಂಗಳೂರು ಜಿಲ್ಲೆಗಳ ಪದವೀಧರರ ಪತ್ತಿನ ಸಹಕಾರ ಸಂಘ
8) ಭಾರತಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ರಾಮನಗರ ಮತ್ತು ಮಾಗಡಿಯಲ್ಲಿ
9) ಮಾಗಡಿ ಒಕ್ಕಲಿಗರ ಸಂಘದ ವತಿಯಿಂದ ವಿದ್ಯಾರ್ಥಿ ನಿಲಯ
10) ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ

ಇನ್ನೂ ಪಟ್ಟಿ ಮಾಡಬಹುದು. ಇವರ ಸೇವೆ ನಿಜವಾಗಿಯೂ ಅನನ್ಯ ಇಷ್ಟೊಂದು ಸಂಸ್ಥೆಗಳನ್ನು ಹುಟ್ಟು ಹಾಕಿ ಬೆಳಸಿದ ಬಿ.ಎಲ್.ಲಕ್ಕೇಗೌಡರ ಶ್ರಮ ಎಂದೂ ಯಾರೂ ಮರೆಯಲಾಗದು.






# ಗಣರಾಜ್ಯೋತ್ಸವ ಮತ್ತು ಭಾರತದ ಸಂವಿಧಾನ

ಜನವರಿ 26ರ ಗಣರಾಜ್ಯೋತ್ಸವ ದಿನ ಪ್ರತಿಯೊಬ್ಬ ಭಾರತೀಯನಿಗೆ ಹಬ್ಬವೇ ಸರಿ. ಏಕೆಂದರೆ ಅಂದಿನ ದಿನ 1950 ನೇ ಇಸವಿಯಲ್ಲಿ ಭಾರತದ ಸಂವಿಧಾನ ನಮಗೆಲ್ಲರಿಗೂ ಸಿಕ್ಕಂತಹ ಗೌರವಯುತ ದಿನ. ಅದರಲ್ಲೂ ಬ್ರಿಟಿಷರು ರೂಪಿಸಿದ್ದ ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್ 1935 ಅನ್ನು ಬದಲಿಸಿದ ದಿನ. ಗಣರಾಜ್ಯೋತ್ಸವದ ದಿನ ದೆಹಲಿಯಲ್ಲಿ ನಮ್ಮ ಸೇನಾ ಶಕ್ತಿಯ ಹಾಗೂ ಭಾರತ ವಿಜ್ಞಾನ ತಂತ್ರಜ್ಞಾನ ಸಹಿತ ವಿವಿಧ ಕ್ಷೇತ್ರಗಳಲ್ಲಿ ಮಾಡಿದ ಸಾಧನೆಯ ವಿರಾಟ ರೂಪವನ್ನು ವಿಶ್ವಕ್ಕೆ ಪ್ರದರ್ಶನ ಮಾಡುವುದನ್ನು ನೋಡುವುದೇ ರೋಮಾಂಚಕ ಅನುಭವವಾಗಿದೆ.

ಗಣರಾಜ್ಯೋತ್ಸವದ ದಿವಸವನ್ನು ಜನವರಿ 26 ರಂದು ಆಯ್ಕೆ ಮಾಡಿದ ಕಾರಣವೆಂದರೆ, ಅದು ಪೂರ್ಣ ಸ್ವರಾಜ್ಯ ದಿನದ ವಾರ್ಷಿಕೋತ್ಸವ ದಿನವಾಗಿತ್ತು (26ನೇ ಜನವರಿ 1930).

26ನೇ ಜನವರಿಯ ದಿನದಂದೇ ಗಣರಾಜ್ಯೋತ್ಸವ ದಿನ ಎಂದು ಘೋಷಿಸಿದ ಕಾರಣ ಏನೆಂದರೆ, 1930ನೇ ಇಸವಿಯ ಇದೇ ದಿನದಂದು ಬ್ರಿಟಿಷರ ಆಡಳಿತದಿಂದ ಹೊರ ತಂದ ಪ್ರಭುತ್ವ ಸ್ಥಿತಿಯ ವಿರುದ್ಧ ಬೇಸತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾರತದ ಸ್ವಾತಂತ್ರ್ಯ (ಪೂರ್ಣ ಸ್ವರಾಜ್) ಎಂದು ಘೋಷಣೆ ಮಾಡಿತು.

### ಭಾರತದ ಸಂವಿಧಾನ ಇಡೀ ವಿಶ್ವದಲ್ಲೇ ಅತಿ ದೊಡ್ಡದು

ಭಾರತೀಯ ಸಂವಿಧಾನ ವಿಶ್ವದ ಎಲ್ಲ ರಾಷ್ಟ್ರಗಳಿಗೆ ಹೋಲಿಸಿದರೆ ಬಹಳ ಉದ್ದನೆಯ ಸಂವಿಧಾನ ಎಂದು ಗುರುತಿಸಲ್ಪಟ್ಟಿದೆ. ನಮ್ಮ ಸಂವಿದಾನದಲ್ಲಿ ಆರಂಭದ ಸಮಯದಲ್ಲಿ 395 ವಿಧಿಗಳಿದ್ದು, 22 ಭಾಗಗಳು ಮತ್ತು 8 ಸಂವಿಧಾನದ ಪರಿಚ್ಛೇದಗಳು ಸೇರಿವೆ. ಇದರಲ್ಲಿ ಏನಿಲ್ಲ ಅಂದರೂ ಸುಮಾರು ಎಂಟು ಸಾವಿರ ಪದಗಳಿವೆ.

ಸಂವಿಧಾನ ತನ್ನಲ್ಲಿ ಪ್ರಸ್ತಾವನೆಯ ಭಾಗವನ್ನು ಹೊಂದಿ, 25 ಭಾಗಗಳಾಗಿ ವಿಂಗಡನೆಗೊಂಡು 448 ವಿಧಿಗಳನ್ನು, 12 ಸಂವಿಧಾನದ ಪರಿಚ್ಛೇದಗಳನ್ನು, 5 ಅನುಬಂಧ ಮತ್ತು 100ಕ್ಕೂ ಅಧಿಕ ತಿದ್ದುಪಡಿಗಳನ್ನು ಒಳಗೊಂಡಿದೆ.

### ಸಂವಿಧಾನ ರಚನೆಗೆ ತೆಗೆದುಕೊಂಡ ಸಮಯ.

ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಸಂವಿಧಾನವನ್ನು ರೂಪುಗೊಳಿಸಲು ಸುಮಾರು 2 ವರ್ಷ, 11 ತಿಂಗಳು ಮತ್ತು 18 ದಿನಗಳೇ ಬೇಕಾಯಿತು.

ಆ ಸಮಯದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ಅವರ ನೇತೃತ್ವದಲ್ಲಿ ಕಾನ್ಸ್ಟಿಟ್ಯುಯೆಂಟ್ ಅಸಂಬ್ಲಿ ಸಂವಿಧಾನವನ್ನು ರೂಪುಗೊಳಿಸಲು ಒಂದು ಡ್ರಾಫ್ಟಿಂಗ್ ಕಮಿಟಿಯನ್ನು ಏರ್ಪಾಡು ಮಾಡಿತು. ಈ ಕಮಿಟಿ ಸಂವಿಧಾನದ ಕರಡನ್ನು ಸಿದ್ಧಪಡಿಸಲು ಹಲವಾರು ಸಭೆಗಳನ್ನು ಕರೆದು, ಅನೇಕ ಮಜಲುಗಳನ್ನು ದಾಟಿ ಸರಿ ಸುಮಾರು 2 ವರ್ಷ, 11 ತಿಂಗಳು ಮತ್ತು 18 ದಿನಗಳನ್ನು ತೆಗೆದುಕೊಂಡಿತು.

### ಮೊದಲ ಗಣರಾಜ್ಯೋತ್ಸವ ಮೆರವಣಿಗೆ

ರಾಜಪಥದಲ್ಲಿ ಮೊದಲನೆಯ ಗಣರಾಜ್ಯೋತ್ಸವ ದಿನದ ಮೆರವಣಿಗೆಯನ್ನು 1955ರಲ್ಲಿ ನಡೆಸಲಾಯಿತು.

ಐತಿಹಾಸಿಕ ರಾಜಪಥ ಜನವರಿ 26ರ ಪೆರೇಡಿಗೆ ಉದಾಹರಣೆಯಾಗಿದೆ. ಮೊದಲನೆಯ ಗಣರಾಜ್ಯೋತ್ಸವದ ಪೆರೇಡನ್ನು ಹೊಸ ದೆಹಲಿಯಲ್ಲಿ 1950ರಲ್ಲಿ ನಡೆಸಲಾಯಿತು. ಆ ಸಮಯದಲ್ಲಿ ಬಾಬು ರಾಜೇಂದ್ರ ಪ್ರಸಾದ್ ರವರು ರಾಷ್ಟ್ರಪತಿಗಳಾಗಿದ್ದರು.

ಇಂದು ಭಾರತದ 14 ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು 72 ನೇ ಗಣರಾಜೋತ್ಸವ ಆಚರಣೆಗೆ ಚಾಲನೆ ನೀಡಿ ದೇಶದ ಮೂರು ಸೇನಾ ಪಡೆಗಳ ಗೌರವ ಸ್ವೀಕರಿಸುತ್ತಿರುವುದು ದೇಶದ ಪಜೆಗಳುಹೆಮ್ಮೆ ಪಡುವ ವಿಷಯವಾಗಿದೆ.

### 21 ಗನ್ನುಗಳ ಗೌರವ ಅಭಿನಂದನೆಯ ಹಿಂದಿನ ರಹಸ್ಯ

ಭಾರತದ ರಾಷ್ಟ್ರಪತಿಗಳು ತಿರಂಗ ರಾಷ್ಟ್ರ ಧ್ವಜವನ್ನು ಹಾರಿಸುವ ಸಮಯದಲ್ಲಿ ನೌಕಾದಳ ಮತ್ತು ಸೇನಾದಳ 21 ಗನ್ನುಗಳಿಂದ ಮದ್ದು ಹಾರಿಸಿ ಅಭಿನಂದನೆ ಸಲ್ಲಿಸುತ್ತಾರೆ. ಇದು ನೋಡಲು ಮನಸ್ಸಿಗೆ ತುಂಬಾ ಖುಷಿಯಾಗುತ್ತದೆ ಮತ್ತು ಮೈ ರೋಮಾಂಚನಗೊಳ್ಳುತ್ತದೆ.

## ಭಾರತದ ಸಂವಿಧಾನದ ಪ್ರಮುಖ ತಿದ್ದುಪಡಿಗಳು

- **ಸಂವಿಧಾನ (1ನೇ ತಿದ್ದುಪಡಿ) ಮಸೂದೆ, 1950**

ಈ ತಿದ್ದುಪಡಿಯು ಸಂವಿಧಾನದ ವಿಧಿ 19 ನೀಡಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಯಾವುದೆ ವೃತ್ತಿಯನ್ನು ನಡೆಸುವ ಅಥವಾ ಯಾವುದೇ ವಾಣಿಜ್ಯ ಅಥವಾ ವ್ಯವಹಾರದಲ್ಲಿ ತೊಡಗುವ ಮೂಲಭೂತ ಹಕ್ಕಿನ ಮೇಲೆ ಹಲವಾರು ಹೊಸ ಆಧಾರಗಳ ಮೇರೆಗೆ ಮಿತಿಯನ್ನು ಹೇರಿದೆ.

- **ಸಂವಿಧಾನ (7ನೇ ತಿದ್ದುಪಡಿ) ಮಸೂದೆ, 1956**

ಈ ತಿದ್ದುಪಡಿಯ ಮೂಲಕ ಭಾಷಾವಾರು ಪ್ರಾಂತದ ಆಧಾರದ ಮೇಲೆ ಇಡೀ ದೇಶವನ್ನು 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡಿಸಲಾಗಿತ್ತು.

- **ಸಂವಿಧಾನ (10ನೇ ತಿದ್ದುಪಡಿ) ಮಸೂದೆ, 1961**

ಈ ತಿದ್ದುಪಡಿಯು ಹಿಂದೆ ಪೋರ್ಚುಗೀಸರ ಅಧೀನದಲ್ಲಿದ್ದ ದಾದ್ರ ಮತ್ತು ನಗರ ಹವೇಲಿಯನ್ನು ಭಾರತದ ಸಾರ್ವಭೌಮತ್ವಕ್ಕೆ ಒಳಪಡಿಸಿ, ರಾಷ್ಟ್ರಪತಿಯವರು ಆಡಳಿತ ನಡೆಸಲು ಅವಕಾಶ ಕಲ್ಪಿಸಿತು.

- **ಸಂವಿಧಾನ (12ನೇ ತಿದ್ದುಪಡಿ) ಮಸೂದೆ, 1962**

12ನೇ ತಿದ್ದುಪಡಿ ಮಸೂದೆಯು ಗೋವಾ, ಡಾಮನ್ ಮತ್ತು ಡಿಯುಗಳನ್ನು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಸಂವಿಧಾನದ 1ನೇ ಪರಿಚ್ಛೇದದಲ್ಲಿ ಅಡಕ ಮಾಡಿತಲ್ಲದೆ ರಾಷ್ಟ್ರಪತಿಗಳಿಗೆ ಈ ಭೂಭಾಗಗಳ ಶಾಂತಿ, ಅಭಿವೃದ್ಧಿ ಹಾಗೂ ಸುಗಮ ಆಡಳಿತಕ್ಕೆ ಬೇಕಾದ ನೀತಿಗಳನ್ನು ರೂಪಿಸಲು ಅಧಿಕಾರ ನೀಡಿತು.

- **ಸಂವಿಧಾನ (13ನೇ ತಿದ್ದುಪಡಿ) ಮಸೂದೆ, 1962**

ಈ ತಿದ್ದುಪಡಿಯು ನಾಗಾಲ್ಯಾಂಡನ್ನು ಭಾರತದ 16ನೇ ರಾಜ್ಯವನ್ನಾಗಿ ರೂಪಿಸಿತು.

- **ಸಂವಿಧಾನ (18ನೇ ತಿದ್ದುಪಡಿ) ಮಸೂದೆ, 1966**

ಈ ತಿದ್ದುಪಡಿಯು ಪಂಜಾಬ್ ಪ್ರದೇಶವನ್ನು ಭಾಷಾ ಆಧಾರದ ಮೇಲೆ ಪಂಜಾಬಿ ಭಾಷೆ ಮಾತನಾಡುವ ರಾಜ್ಯವಾಗಿ ಪಂಜಾಬನ್ನು ಮತ್ತು ಹಿಂದಿ ಮಾತನಾಡುವ ರಾಜ್ಯವಾಗಿ ಹರಿಯಾಣ ಎಂದು ಪುನರಚಿಸುವ ಅವಕಾಶ ಕಲ್ಪಿಸಿತು.

- **ಸಂವಿಧಾನ (22ನೇ ತಿದ್ದುಪಡಿ) ಮಸೂದೆ, 1969**

ಈ ತಿದ್ದುಪಡಿಯು ಅಸ್ಸಾಂನ್ನು ಪುನರ್ರಚಿಸಿ ಮೇಘಾಲಯ ಎಂಬ ನೂತನ ರಾಜ್ಯವನ್ನು ರೂಪಿಸಲು ಸಂಸತ್ತಿಗೆ ಅಧಿಕಾರ ನೀಡಿತು.

- **ಸಂವಿಧಾನ (24ನೇ ತಿದ್ದುಪಡಿ) ಮಸೂದೆ, 1971**

ಸಂವಿಧಾನದ ಯಾವುದೇ ಭಾಗವನ್ನು ತಿದ್ದುಪಡಿ ಮಾಡುವ ಅಧಿಕಾರ ಲೋಕಸಭೆಗೆ ಇದೆ. ಲೋಕಸಭೆ ಹಾಗೂ ರಾಜ್ಯಸಭೆ ಉಭಯಸದನಗಳು ಅಂಗೀಕರಿಸಿದ ಯಾವುದೇ ಸಾಂವಿಧಾನಿಕ ತಿದ್ದುಪಡಿಯನ್ನು ಭಾರತದ ರಾಷ್ಟ್ರಪತಿಗಳು ಕಡ್ಡಾಯವಾಗಿ




ಅನುಮೋದಿಸತಕ್ಕದ್ದು ಎಂದು ಈ ತಿದ್ದುಪಡಿ ಸಾರಿತು.

- **ಸಂವಿಧಾನ (31ನೇ ತಿದ್ದುಪಡಿ) ಮಸೂದೆ, 1973**

ಈ ತಿದ್ದುಪಡಿಯು ಲೋಕಸಭೆಯ ಸದಸ್ಯರ ಗರಿಷ್ಠ ಸಂಖ್ಯೆಯನ್ನು 525 ರಿಂದ 545ಕ್ಕೆ ಏರಿಸಿತು.

- **ಸಂವಿಧಾನ (36ನೇ ತಿದ್ದುಪಡಿ) ಮಸೂದೆ, 1975**

ಈ ತಿದ್ದುಪಡಿಯು ಸಿಕ್ಕಿಂನ್ನು ಭಾರತ ಒಕ್ಕೂಟದ 22ನೇ ರಾಜ್ಯವನ್ನಾಗಿ ರಚಿಸಿತು.

- **ಸಂವಿಧಾನ (42ನೇ ತಿದ್ದುಪಡಿ) ಮಸೂದೆ 1976**

ಸಮಾಜವಾದಿ, ಜಾತ್ಯತೀತ ಮತ್ತು ಸಾರ್ವಭೌಮ ಎಂಬ ಪದಗಳನ್ನು ಸಂವಿಧಾನದ ಪ್ರಸ್ತಾವನೆಗೆ ಸೇರಿಸಿದ ತಿದ್ದುಪಡಿ ಇದು. ಅಲ್ಲದೆ ನಾಗರೀಕರ ಮೂಲಭೂತ ಕರ್ತವ್ಯಗಳನ್ನು ಪಟ್ಟಿ ಮಾಡಲಾಯಿತು.

- **ಸಂವಿಧಾನ (44ನೇ ತಿದ್ದುಪಡಿ) ಮಸೂದೆ 1978**

ತುರ್ತುಪರಿಸ್ಥಿತಿಗೆ ಸಂಬಂಧಿಸಿದಂತೆ ಕೇಂದ್ರ ಸಚಿವ ಸಂಪುಟ ತನ್ನ ತೀರ್ಮಾನವನ್ನು ಲಿಖಿತವಾಗಿ ತಿಳಿಸದ ಹೊರತು ರಾಷ್ಟ್ರಪತಿಗಳು ತುರ್ತು ಪರಿಸ್ಥಿತಿ ಘೋಷಿಸುವಂತಿಲ್ಲ ಎಂದು ಈ ಮೂಲಕ ಸಾರಲಾಯಿತು. ಜೊತೆಗೆ ಆಸ್ತಿ ಹಕ್ಕನ್ನು ಮೂಲಭೂತ ಹಕ್ಕುಗಳ ಪಟ್ಟಿಯಿಂದ ತೆಗೆದು ಹಾಕಲಾಯಿತು.

- **ಸಂವಿಧಾನ (52ನೇ ತಿದ್ದುಪಡಿ) ಮಸೂದೆ 1985**

ಈ ತಿದ್ದುಪಡಿಯು ಶಾಸನ ಸಂಸ್ಥೆಗಳಿಗೆ ಒಂದು ಪಕ್ಷದಿಂದ ಚುನಾಯಿತರಾದ ಸದಸ್ಯರು ಇನ್ನೊಂದು ಪಕ್ಷಕ್ಕೆ ಪಕ್ಷಾಂತರ ಮಾಡುವುದನ್ನು (ಪಕ್ಷಾಂತರ ನಿಷೇಧ ಕಾನೂನು) ನಿಷೇದಿಸಿತು.

- **ಸಂವಿಧಾನ (56ನೇ ತಿದ್ದುಪಡಿ) ಮಸೂದೆ, 1987**

ಈ ತಿದ್ದುಪಡಿಯು ಕೇಂದ್ರಾಡಳಿತ ಪ್ರದೇಶವಾಗಿದ್ದ ಗೋವಾಕ್ಕೆ ರಾಜ್ಯದ ಸ್ಥಾನಮಾನವನ್ನು ಕಲ್ಪಿಸಿತು.

- **ಸಂವಿಧಾನ (61ನೇ ತಿದ್ದುಪಡಿ) ಮಸೂದೆ, 1989**

61 ನೇ ಸಂವಿಧಾನ ತಿದ್ದುಪಡಿ ಮಸೂದೆಯು ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಮತ ಚಲಾಯಿಸುವ ಮತದಾರರ ಕನಿಷ್ಠ ವಯಸ್ಸನ್ನು 21 ರಿಂದ 18ಕ್ಕೆ ಇಳಿಸಿತು.

● **ಸಂವಿಧಾನ (71ನೇ ತಿದ್ದುಪಡಿ) ಮಸೂದೆ, 1991**

ಈ ತಿದ್ದುಪಡಿಯು ಕೊಂಕಣಿ, ಮಣಿಪುರಿ ಮತ್ತು ನೇಪಾಳಿ ಭಾಷೆಗಳನ್ನು ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರಿಸಲು ಅವಕಾಶ ಕಲ್ಪಿಸಿತು.

● **ಸಂವಿಧಾನ (73ನೇ ಮತ್ತು 74ನೇ ತಿದ್ದುಪಡಿಗಳು) ಮಸೂದೆ 1992**

ಅಧಿಕಾರ ವಿಕೇಂದ್ರೀಕರಣದ ಮೂಲಕ ಸ್ಥಳೀಯ ಸ್ವ-ಆಡಳಿತ ಪರಿಚಯಿಸಲಾಯಿತು. ಗ್ರಾಮ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಾಂವಿಧಾನಿಕ ಸ್ಥಾನಮಾನ ದೊರೆಯುವಂತಾಯಿತು. ಪುರಸಭೆಗಳನ್ನು ಕುರಿತು ಹೊಸ ಸೇರ್ಪಡೆ ಮಾಡಲಾಯಿತು.

● **ಸಂವಿಧಾನ (74ನೇ ತಿದ್ದುಪಡಿ) ಮಸೂದೆ, 1993**

ಈ ಮಸೂದೆಯು ತ್ರಿಪುರ ಶಾಸನಸಭೆಯಲ್ಲಿ ಪರಿಶಿಷ್ಟ ಪಂಗಡಗಳಿಗೆ 20 ಸ್ಥಾನಗಳನ್ನು ಮೀಸಲಿರಿಸಲು ಅವಕಾಶ ನೀಡಿತು.

● **ಸಂವಿಧಾನ (75ನೇ ತಿದ್ದುಪಡಿ) ಮಸೂದೆ, 1994**

ಇದು ರಾಜ್ಯಗಳ ಮಟ್ಟದಲ್ಲಿ ಬಾಡಿಗೆ ನಿಯಂತ್ರಣ ಪ್ರಾಧಿಕಾರಗಳನ್ನು ಸ್ಥಾಪಿಸಲು ಅವಕಾಶ ಮಾಡಿ ಕೊಟ್ಟಿತು.

● **ಸಂವಿಧಾನ (76ನೇ ತಿದ್ದುಪಡಿ) ಮಸೂದೆ, 1994**

ಈ ತಿದ್ದುಪಡಿಯು ತಮಿಳುನಾಡು ಮೀಸಲಾತಿ ಕಾನೂನನ್ನು ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಿತು.

● **ಸಂವಿಧಾನ (77ನೇ ತಿದ್ದುಪಡಿ) ಮಸೂದೆ, 1994**

ಈ ತಿದ್ದುಪಡಿಯು ರಾಜ್ಯಗಳ ಯಾವುದೇ ದರ್ಜೆ ಅಥವಾ ದರ್ಜೆಗಳ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ನೇಮಕಗೊಂಡಿಲ್ಲ ಎಂದು ರಾಜ್ಯಗಳಿಗೆ ಅನಿಸಿದ್ದಲ್ಲಿ, ಈ ಹುದ್ದೆಗಳಲ್ಲಿ ಸದರಿ ವರ್ಗಗಳಿಗೆ ಬಡ್ತಿ ನೀಡಲು ಅವಕಾಶ ಕಲ್ಪಿಸುವ ಸವಲತ್ತು ನೀಡಿತು.

● **ಸಂವಿಧಾನ (78ನೇ ತಿದ್ದುಪಡಿ) ಮಸೂದೆ, 1995**

ಈ ತಿದ್ದುಪಡಿಯು ರಾಜ್ಯಗಳ ಕೆಲವು ನಿರ್ದಿಷ್ಟ ಭೂಸುಧಾರಣಾ ಕಾನೂನುಗಳನ್ನು ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಲು ಅವಕಾಶ ನೀಡಿತು.

● **ಸಂವಿಧಾನ (79ನೇ ತಿದ್ದುಪಡಿ) ಮಸೂದೆ, 1999**

ಈ ತಿದ್ದುಪಡಿಯು ಪರಿಶಿಷ್ಟಜಾತಿ ಮತ್ತು ಪಂಗಡಗಳಿಗೆ ಸರ್ಕಾರಿ ಸೇವೆಗಳಲ್ಲಿ ಮೀಸಲಾತಿಯನ್ನು ಹಾಗೂ ಲೋಕಸಭೆಗೆ ಇಬ್ಬರು ಆಂಗ್ಲೋ – ಇಂಡಿಯನ್ ಸದಸ್ಯರನ್ನು ನಾಮಕರಣ ಮಾಡುವುದನ್ನು 2010ನೇ ವರ್ಷದವರೆಗೆ ವಿಸ್ತರಿಸುವ ಅವಕಾಶ ಕಲ್ಪಿಸಿತು.

● **ಸಂವಿಧಾನ (86ನೇ ತಿದ್ದುಪಡಿ) ಮಸೂದೆ, 2002**

6 ರಿಂದ 14 ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ನೀಡುವ ಹೊಸ ವಿಧಿ ಸೇರ್ಪಡೆಯಾಯಿತು. ಇದು ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಲು ಅನುವು ಮಾಡಿಕೊಡುತ್ತದೆ.

● **ಸಂವಿಧಾನ (91ನೇ ತಿದ್ದುಪಡಿ) ಮಸೂದೆ, 2003**

ಈ ತಿದ್ದುಪಡಿಯು ಪಕ್ಷಾಂತರಿಯು ಇನ್ನುಳಿದ ಶಾಸನ ಸಭೆಯ ಅವಧಿಯವರೆಗೆ ಅಥವಾ ಮುಂದಿನ ಚುನಾವಣೆಯವರೆಗೆ ಯಾವುದೇ ಹುದ್ದೆ ಅಧಿಕಾರ ಹೊಂದದಂತೆ ಮಿತಿ ಹೇರಿದೆಯಲ್ಲದೆ ಮಂತ್ರಮಂಡಲದ ಗಾತ್ರವು ಶಾಸನ ಸಭೆಯ ಒಟ್ಟು ಸದಸ್ಯರ ಶೇಕಡಾ 15 ರಷ್ಟಿರಬೇಕೆಂದು ಸೂಚಿಸಿತು.

● **ಸಂವಿಧಾನ (93ನೇ ತಿದ್ದುಪಡಿ) ಮಸೂದೆ, 2006**

ಸಂವಿದಾನದ ಈ ತಿದ್ದುಪಡಿಯು ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಮಾತ್ರವಲ್ಲದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿಗೆ ಅವಕಾಸ ಕಲ್ಪಿಸಿತು.

● **ಸಂವಿಧಾನ (101ನೇ ತಿದ್ದುಪಡಿ) 2016**

ಈ ತಿದ್ದುಪಡಿಯಿಂದ ಸರಕು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಗೆ ತರಲಾಗಿದೆ.

● **ಸಂವಿಧಾನ (102ನೇ ತಿದ್ದುಪಡಿ) ಮಸೂದೆ, 2018**

ಈ ತಿದ್ದುಪಡಿಯು ಹಿಂದುಳಿದ ವರ್ಗಗಳಿಗೆ ರಾಷ್ಟ್ರೀಯ ಆಯೋಗವನ್ನು ಸ್ಥಾಪಿಸಿ ಅದಕ್ಕೆ ಸಾಂವಿಧಾನಿಕ ಸ್ಥಾನಮಾನಗಳನ್ನು ನೀಡಬೇಕು ಎಂದು ಹೇಳಲಾಗಿದೆ.

● **ಸಂವಿಧಾನ (103ನೇ ತಿದ್ದುಪಡಿ) ಮಸೂದೆ, 2019**

ಆರ್ಥಿಕವಾಗಿ ದುರ್ಬಲವಾದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಶೇ.10ರಷ್ಟು ಮೀಸಲಾತಿಯನ್ನು ಈ ತಿದ್ದುಪಡಿಗೆ ಮೂಲಕ ಒದಗಿಸಲಾಯಿತು.

● **ಸಂವಿಧಾನ (104ನೇ ತಿದ್ದುಪಡಿ) ಮಸೂದೆ 2020**

ಈ ತಿದ್ದುಪಡಿಯು ಲೋಕಸಭೆಗೆ ಆಂಗ್ಲೋ ಇಂಡಿಯನ್ ಸ್ಥಾನಗಳನ್ನು ತೆಗೆದುಹಾಕಿ, ಪ್ರಸ್ತುತ ಲೋಕಸಭೆಯ ಸ್ಥಾನಗಳ ಸಂಖ್ಯೆ 545 ರಿಂದ 543ಕ್ಕೆ ಇಳಿಸಿದೆ.

## ಮೂಲಭೂತ ಹಕ್ಕುಗಳು

ಮೂಲಭೂತ ಹಕ್ಕುಗಳು ವ್ಯಕ್ತಿತ್ವ ವಿಕಸನದ ಅವಿಭಾಜ್ಯ ಅಂಗಗಳಾಗಿವೆ. ಭಾರತದ ಸಂವಿಧಾನದ ಮೂರನೆಯ ಭಾಗವು ತನ್ನ ಪ್ರಜೆಗಳಿಗೆ ಆರು ಮೂಲಭೂತ ಹಕ್ಕುಗಳನ್ನು ಕಲ್ಪಿಸಿದೆ.

1. **ಸ್ವಾತಂತ್ರದ ಹಕ್ಕು**
2. **ಸಮಾನತೆಯ ಹಕ್ಕು**
3. **ಶೋಷಣೆಯ ವಿರುದ್ಧದ ಹಕ್ಕು**
4. **ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಹಕ್ಕು**
5. **ಧಾರ್ಮಿಕ ಸ್ವಾತಂತ್ರ್ಯದ ಹಕ್ಕು**
6. **ಸಂವಿಧಾನಾತ್ಮಕ ಪರಿಹಾರಗಳ ಹಕ್ಕು**

ಸಂವಿಧಾನದ ಮೂಲಭೂತ ಹಕ್ಕುಗಳ ರಕ್ಷಣೆಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿದೆ, ಆದ್ದರಿಂದ ಸರ್ವೋಚ್ಚ ನ್ಯಾಯಾಲಯವನ್ನು "ಭಾರತ ಸಂವಿಧಾನದ ರಕ್ಷಕ/ಕಾವಲುಗಾರ" ಎಂದು ಕರೆಯಲಾಗುತ್ತದೆ.

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**
**ವಿಶೇಷ ರಾಜ್ಯ ಪತ್ರಿಕೆ**

| ಭಾಗ–1 | ಬೆಂಗಳೂರು, ಮಂಗಳವಾರ, 14 ಡಿಸೆಂಬರ್, 2021 (ಮಾರ್ಗಶಿರ, 23, ಶಕವರ್ಷ, 1943) | ನಂ. 953 |
|---|---|---|

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಆಸುಇ 36ಎಸ್ಆರ್‌ಸಿ2021

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ : 14.12.2021

## ಸುತ್ತೋಲೆ

**ವಿಷಯ : ಅಂತರ್ಜಾಲ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸರ್ಕಾರಿ ನೌಕರರ ನಡತೆಯ ಕನಾಸೇ (ನಡತೆ) ನಿಯಮಗಳು, 2021ಗೆ ಒಳಪಡುವ ಬಗ್ಗೆ.**

* * * * *

ಕರ್ನಾಟಕ ರಾಜ್ಯ ನಾಗರೀಕ ಸೇವಾ(ನಡತೆ) ನಿಯಮಗಳು, 2021ರ ನಿಯಮ 3(1)ರ ಅನುಸಾರ ಪ್ರತಿಯೊಬ್ಬ ಸರ್ಕಾರಿ ನೌಕರನು ಎಲ್ಲಾ ಕಾಲಗಳಲ್ಲಿಯೂ ಸಂಪೂರ್ಣ ನೀತಿ ನಿಷ್ಠೆಯನ್ನು ಹೊಂದಿರತಕ್ಕದ್ದು ಹಾಗೂ ಸರ್ಕಾರಿ ನೌಕರನಿಗೆ ಅನುಚಿತವಾದ ಯಾವುದನ್ನು ಮಾಡತಕ್ಕದ್ದಲ್ಲ. ಅದೇ ನಿಯಮಗಳ ನಿಯಮ 3(2)ರ ಅನುಸಾರ ಪ್ರತಿಯೊಬ್ಬ ಸರ್ಕಾರಿ ನೌಕರನು ರಾಜಕೀಯವಾಗಿ ತಟಸ್ಥನಾಗಿರತಕ್ಕದ್ದು. ಮುಂದುವರೆದು ಅದೇ ನಿಯಮಗಳ ನಿಯಮ 3(5)ರ ಅನುಸಾರ ಪ್ರತಿಯೊಬ್ಬ ಸರ್ಕಾರಿ ನೌಕರನು ಸಾರ್ವಜನಿಕ ಸುವ್ಯವಸ್ಥೆ, ಸಭ್ಯತೆ ಮತ್ತು ನೈತಿಕತೆಯನ್ನು ಸಮರ್ಥಿಸತಕ್ಕದ್ದು ಮತ್ತು ಎತ್ತಿಹಿಡಿಯತಕ್ಕದ್ದು. ಅಲ್ಲದೇ ನ್ಯಾಯಸಮ್ಮತವಾಗಿ ಮತ್ತು ನಿಷ್ಪಕ್ಷಪಾತದಿಂದ ಕಾರ್ಯನಿರ್ವಹಿಸತಕ್ಕದ್ದು ಹಾಗೂ ಯಾವುದೇ ವ್ಯಕ್ತಿಯ ಅಥವಾ ಪಕ್ಷದ ಬಗ್ಗೆ ತಾರತಮ್ಯ ಮಾಡತಕ್ಕದ್ದಲ್ಲ.

2021ರ ನಿಯಮಗಳ 10ರ ಅನುಸಾರ ಆಕಾಶವಾಣಿ, ದೂರದರ್ಶನ ಪ್ರಸಾರ, ಚಲನಚಿತ್ರ ಅಥವ ಬರವಣಿಗೆಯು ಸಂಪೂರ್ಣವಾಗಿ ಸಾಹಿತ್ಯಕ, ಕಲಾತ್ಮಕ ಅಥವಾ ವೈಜ್ಞಾನಿಕ ಸ್ವರೂಪದ್ದಾಗಿರದ ಹೊರತು ಸರ್ಕಾರಿ ನೌಕರನು ನೇಮಿಸಲಾದ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆಯಬೇಕಾಗುತ್ತದೆ. ಮುಂದುವರೆದು ನಿಯಮ 10ರ 2ನೇ ಪರಂತುಕದಲ್ಲಿ ಇಂತಹ ಚಟುವಟಿಕೆಗಳಿಂದ ಸರ್ಕಾರಿ ನೌಕರರ ಅಧಿಕೃತ ಕರ್ತವ್ಯಗಳಿಗೆ ಭಾದಕವಾಗಬಾರದು ಎಂದು ಸ್ಪಷ್ಟಪಡಿಸಲಾಗಿದೆ. ಅದೇ ನಿಯಮಗಳ ನಿಯಮ 11ರ ಅನುಸಾರ ಸರ್ಕಾರಿ ನೌಕರನು ಕರ್ನಾಟಕ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಅಥವಾ ಯಾವುದೇ ಇತರ ರಾಜ್ಯ ಸರ್ಕಾರದ ಪ್ರಸ್ತುತ ಅಥವಾ ಇತ್ತೀಚಿನ ಯಾವುದೇ ನೀತಿಯ ಅಥವಾ ಕ್ರಮದ ಬಗ್ಗೆ ಪ್ರತಿಕೂಲ ಟೀಕೆಯ ಪರಿಣಾಮ ಹೊಂದಿರುವಂತಹ ಯಾವುದೇ ಸಂಗತಿಗಳ ನಿರೂಪಣೆಯನ್ನು ಮಾಡತಕ್ಕದ್ದಲ್ಲ ಅಥವಾ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕದ್ದಲ್ಲ. ಸರ್ಕಾರಿ ನೌಕರರ ಮಾನ್ಯತೆ ಪಡೆದ ಸಂಘದ ಪದಾಧಿಕಾರಿಗಳು ಸರ್ಕಾರಿ ನೌಕರರ ಸೇವಾ ಸ್ಥಿತಿಗತಿ ರಕ್ಷಿಸುವ ಅಥವಾ ಅವುಗಳಲ್ಲಿ ಸುಧಾರಣೆಯನ್ನು ಸುನಿಶ್ಚಿತಗೊಳಿಸುವ ಉದ್ದೇಶಗಳಿಗಾಗಿ ವ್ಯಕ್ತಪಡಿಸಿದ ಪ್ರಾಮಾಣಿಕ ಅಭಿಪ್ರಾಯಗಳಿಗೆ ಇದರಿಂದ ವಿನಾಯಿತಿ ನೀಡಲಾಗಿದೆ.

ಮೇಲಿನ ನಿಯಮಗಳು ಓರ್ವ ಸರ್ಕಾರಿ ನೌಕರನು ಸಮಾಜದಲ್ಲಿ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕೆಂಬುದನ್ನು ಸ್ಪಷ್ಟಪಡಿಸುತ್ತವೆ. ಅದರೆ, ಇತ್ತೀಚಿನ ದಿನಗಳಲ್ಲಿ ಕೆಲವು ಸರ್ಕಾರಿ ನೌಕರರು ಅಂತರ್ಜಾಲದ ವೆಬ್‌ಸೈಟ್‌ಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ 2021ರ ನಡತೆ ನಿಯಮಗಳ ಅವಕಾಶಗಳನ್ನು ಮೀರಿ ಸರ್ಕಾರ ನೌಕರರಿಗೆ ಮುಜುಗರ ಉಂಟು ಮಾಡುವಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಕಂಡು ಬರುತ್ತಿದೆ. ಅಲ್ಲದೆ, ಸರ್ಕಾರದ ನೀತಿಗೆ ವಿರುದ್ಧವಾದ ಅಥವಾ ನಿರ್ದಿಷ್ಟ ರಾಜಕೀಯ ಪಕ್ಷಕ್ಕೆ ಸಂಬಂದಿಸಿದ ಲೇಖನ, ಅಭಿಪ್ರಾಯ ಮತ್ತು ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವುದನ್ನು ಗಮನಿಸಲಾಗಿದೆ.

ಅಂತರ್ಜಾಲದಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸರ್ಕಾರಿ ನೌಕರನು ಪ್ರದರ್ಶಿಸುವ ವರ್ತನೆಯು ಸಹ ಕರ್ನಾಟಕ ರಾಜ್ಯ ನಾಗರೀಕ ಸೇವಾ (ನಡತೆ) ನಿಯಮಗಳು, 2021ರ ವ್ಯಾಪ್ತಿಗೆ ಒಳಪಡುತ್ತವೆ. ಈ ನಿಯಮಗಳಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುವ ಸರ್ಕಾರಿ ನೌಕರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ಅವಕಾಶಗಳನ್ವಯ ಶಿಸ್ತುಕ್ರಮ ಕೈಗೊಳ್ಳುವಂತೆ ಸಕ್ಷಮ ಪ್ರಾಧಿಕಾರಗಳಿಗೆ ಈ ಮೂಲಕ ತಿಳಿಸಲಾಗಿದೆ.

**(ನಾಗರತ್ನ ವಿ. ಪಾಟೀಲ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು–2)



# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

▸▸ **ಬಸವೇಗೌಡ,** ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು.

.........ಹಿಂದಿನ ಸಂಚಿಕೆಯಿಂದ

**ಸಹಕಾರ ಸಂಘಗಳ ವಿಧ (Types of Cooperatives)**

ಸಹಕಾರ ಸಂಘಗಳ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ಅವುಗಳನ್ನು ವರ್ಗೀಕರಿಸಲಾಗುತ್ತದೆ. ಮುಖ್ಯವಾಗಿ ಎರಡು ವಿಧ –

**1) ಪತ್ತಿನ (ಸಾಲ) ಸಹಕಾರ ಸಂಘಗಳು**

**2) ಪತ್ತೇತರ (ಸಾಲೇತರ) ಸಹಕಾರ ಸಂಘಗಳು**

**1. ಪತ್ತಿ ಸಹಕಾರ ಸಂಘಗಳು (Credit Cooperative Societies):**

ಇವುಗಳಲ್ಲಿ ಎರಡು ವಿಧ –

(i) ಕೃಷಿ ಪತ್ತಿನ ಸಹಕಾರ ಸಂಘಗಳು (Agricultural Credit Cooperative Societies)

(ii) ಕೃಷಿಯೇತರ ಪತ್ತಿನ ಸಹಕಾರ ಸಂಘಗಳು (Non-Agricultural Credit Co-operative Societies)

**ಇವುಗಳ ಬಗ್ಗೆ ಸಂಕ್ಷಿಪ್ತವಾಗಿ –**

**(i) ಕೃಷಿ ಪತ್ತಿನ ಸಹಕಾರ ಸಂಘಗಳು :** ಇವು ಮುಖ್ಯವಾಗಿ ಕೃಷಿ ಸಾಲಗಳನ್ನು ನೀಡುತ್ತವೆ. ಇವುಗಳಲ್ಲಿ ಎರಡು ವಿಧ ಇರುತ್ತವೆ.

**ಅ) ಅಲ್ಪಾವಧಿ ಕೃಷಿ ಪತ್ತಿನ ಸಹಕಾರ ಸಂಘಗಳು (Short Term Agricultural Credit Cooperative Societies)**

ಇವು ಮುಖ್ಯವಾಗಿ ಅಲ್ಪಾವಧಿ ಅಂದರೆ, ಬೆಳೆ ಸಾಲಗಳನ್ನು (Crop Loans - 12 ರಿಂದ 18 ತಿಂಗಳ ಅವಧಿ) ಹಾಗೂ ಮಧ್ಯಮಾವಧಿ (Medium Term - 03 ರಿಂದ 07 ವರ್ಷಗಳ ಅವಧಿ) ಸಾಲಗಳನ್ನು ನೀಡುತ್ತವೆ. ಈ ಸಾಲಗಳನ್ನು ನೀಡುವ ವ್ಯವಸ್ಥೆಯು ಮೂರು ಹಂತಗಳಿಂದ ಕೂಡಿರುತ್ತದೆ – ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು (D.C.C Banks) ಹಾಗೂ ಗ್ರಾಮೀಣ ಮಟ್ಟದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು (P.A.C.S)

**ಆ) ದೀರ್ಘಾವಧಿ ಕೃಷಿ ಪತ್ತಿನ ಸಹಕಾರ ಸಂಘಗಳು (Long Term Agricultural Credit Cooperative Societies)**

ಇವು ದೀರ್ಘಾವಧಿಯ ಅಂದರೆ, 7 ರಿಂದ 15 ವರ್ಷಗಳ ಅವಧಿಯ ಕೃಷಿ ಹೂಡಿಕೆ (Agricultural Investment) ಸಾಲಗಳನ್ನು ನೀಡುತ್ತವೆ. ಈ ವ್ಯವಸ್ಥೆಯು ಎರಡು ಈ ಹಂತಗಳಿಂದ ಕೂಡಿರುತ್ತದೆ. ರಾಜ್ಯಮಟ್ಟದಲ್ಲಿ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಹಾಗೂ ತಾಲ್ಲೂಕು ಮಟ್ಟದಲ್ಲಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (NABARD) ಇದು ಕೃಷಿ ಸಾಲ ನೀಡುವ ರಾಷ್ಟ್ರ ಮಟ್ಟದ ಸಂಸ್ಥೆಯಾಗಿರುತ್ತದೆ.

**(ii) ಕೃಷಿಯೇತರ ಪತ್ತಿನ ಸಹಕಾರ ಸಂಘಗಳು :** ಇವು ಕೃಷಿ ಹೊರತಾದ ಸಾಲಗಳನ್ನು ನೀಡುತ್ತವೆ. ಪತ್ತಿನ ಸಹಕಾರ ಸಂಘಗಳು, ನೌಕರರ ಪತ್ತಿನ ಸಹಕಾರ ಸಂಘಗಳು ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳು ಈ ವರ್ಗಕ್ಕೆ ಸೇರಿರುತ್ತವೆ. ಈ ಸಂಸ್ಥೆಗಳು ವೇತನಾಧರಿತ, ಗಿರವಿ, ನಿವೇಶನ ಖರೀದಿ, ಗೃಹ ನಿರ್ಮಾಣ, ವಿದ್ಯಾಭ್ಯಾಸ, ವ್ಯಾಪಾರ, ಇತ್ಯಾದಿ ಸಾಲಗಳನ್ನು ನೀಡುತ್ತವೆ.

**2) ಪತ್ತೇತರ (ಸಾಲೇತರ) ಸಹಕಾರ ಸಂಘಗಳು (Non- Credit Cooperative Societies) :**

ಇವುಗಳಲ್ಲಿ ಎರಡು ವಿಧ –

**(i) ಕೃಷಿ ಪತ್ತೇತರ ಸಹಕಾರ ಸಂಘಗಳು (Agricultural Non-Credit Cooperative Societies)** : ಈ ಸಂಘಗಳು ಕೃಷಿ ಪೂರಕ ಚಟುವಟಿಕೆಗಳ ಉದ್ದೇಶಗಳನ್ನು ಹೊಂದಿದ್ದು, ಸಾಲಗಳನ್ನು ನೀಡುವುದಿಲ್ಲ. ಉದಾ : ಮಾರಾಟ, ಸಂಸ್ಕರಣಾ, ಸಕ್ಕರೆ ಕಾರ್ಖಾನೆಗಳು, ಡೇರಿ, ಬೇಸಾಯ ಇತ್ಯಾದಿ ಸಂಘಗಳು.

**(ii)** ಕೃಷಿಯೇತರ ಪತ್ತೇತರ ಸಹಕಾರ ಸಂಘಗಳು **(Non-Agricultural Non-Credit Cooperative Societies)** : ಈ ವಿಧದ ಸಂಘಗಳು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿರುವುದಿಲ್ಲ ಹಾಗೂ ಸಾಲಗಳನ್ನು ನೀಡುವುದಿಲ್ಲ. ಈ ಎರಡು ಹೊರತಾದ ಧ್ಯೇಯೋದ್ದೇಶವುಳ್ಳ ಸಂಘಗಳಾಗಿರುತ್ತವೆ. ಉದಾ: ಗ್ರಾಹಕ, ನೇಕಾರರ, ಗೃಹ ನಿರ್ಮಾಣ, ಕೈಗಾರಿಕೆ, ಮೀನುಗಾರಿಕೆ, ಸಾರಿಗೆ ಇತ್ಯಾದಿ ಸಹಕಾರ ಸಂಘಗಳು.

(i) ಕೃಷಿ ಪತ್ತಿನ ಸಹಕಾರ ಸಂಘಗಳು


(ii) ಕೃಷಿಯೇತರ ಪತ್ತಿನ ಸಹಕಾರ ಸಂಘಗಳು

ಕೃಷಿ ಪತ್ತೇತರ ಸಹಕಾರ ಸಂಘಗಳು

(iii) ಕೃಷಿಯೇತರ ಪತ್ತೇತರ ಸಹಕಾರ ಸಂಘಗಳು

**ಸಹಕಾರ ಕೃಷಿ ಪತ್ತಿನ ಸಂಘಗಳು (Agricultural Credit Cooperatives) :** ಇವು ಮುಖ್ಯವಾಗಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳನ್ನು ನೀಡುತ್ತವೆ. ಇವುಗಳಲ್ಲಿ ಎರಡು ವಿಧ – ಅಲ್ಪಾವಧಿ ಮತ್ತು ದೀರ್ಘಾವಧಿ ಕೃಷಿ ಪತ್ತಿನ ಸಂಘಗಳು.

ಸಹಕಾರಿ ಕೃಷಿ ಸಾಲ ವಿತರಣಾ ವ್ಯವಸ್ಥೆ / ರಚನೆ




**ಅಲ್ಪಾವಧಿ ಸಹಕಾರ ಕೃಷಿ ಪತ್ತಿನ ವ್ಯವಸ್ಥೆ (Short Term Cooperative Agricultural Credit Structure) :** ಈ ವ್ಯವಸ್ಥೆಯು ಮುಖ್ಯವಾಗಿ ಅಲ್ಪಾವಧಿ ಅಂದರೆ, 12 ರಿಂದ 18 ತಿಂಗಳ ಅವಧಿಯ ಬೆಳೆ ಸಾಲ (Crop Loans) ಹಾಗೂ 3 ರಿಂದ 7 ವರ್ಷಗಳ ಅವಧಿಯ ಮಧ್ಯಮಾವಧಿ (Medium Term) ಸಾಲಗಳನ್ನು ನೀಡುತ್ತವೆ. ಈ ಸಾಲಗಳ ವಿತರಣಾ ವ್ಯವಸ್ಥೆಯು ಮೂರು ಹಂತಗಳಿಂದ ಕೂಡಿರುತ್ತದೆ – ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು (D.C.C Banks) ಹಾಗೂ ಗ್ರಾಮೀಣ ಮಟ್ಟದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು (P.A.C.S). ಕೃಷಿಕರು ಮತ್ತು ಗ್ರಾಮೀಣ ಭಾಗದ ಅಭಿವೃದ್ಧಿಗೆ ವಿವಿಧ ಬಗೆಯ ಸಾಲಗಳನ್ನು ಹಾಗೂ ಇತರೆ ಬಗೆಯ ಸೇವೆಗಳನ್ನು ನೀಡುವುದು ಇವುಗಳ ಮುಖ್ಯ ಗುರಿಯಾಗಿರುತ್ತದೆ.

ಮುಂದುವರೆಯುವುದು...

# "ಸಹಕಾರ"ದಲ್ಲಿ ಡಾಕ್ಟರೇಟ್ ಪದವಿ ಪಡೆದ ಪ್ರಥಮ ಇಲಾಖಾ ಅಧಿಕಾರಿ : ಶ್ರೀ ಗುರುಸ್ವಾಮಿ



**ಗುರುಸ್ವಾಮಿ**
ಸದಸ್ಯರು (ಸಹಕಾರ), ಕೆ.ಎ.ಟಿ. ಬೆಂಗಳೂರು.

ಸಹಕಾರ ಇಲಾಖೆಯಲ್ಲಿ ಅಡಿಷನಲ್ ರಿಜಿಸ್ಟ್ರಾರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀಗುರುಸ್ವಾಮಿ ಇವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ|| ಬಿ.ಎಸ್. ಚಂದ್ರಶೇಖರ್‌ರವರ ಮಾರ್ಗದರ್ಶನದಲ್ಲಿ "Performance Evaluation of District Central Co operative Banks in Karnataka-A Case study of Mysuru and Chamarajnagara Districts" ಎಂಬ ವಿಷಯದ ಮೇಲೆ ಮಹಾಪ್ರಬಂಧವನ್ನು ಮಂಡಿಸಿ ಸಹಕಾರ ವಿಷಯದಲ್ಲಿ ಪಿ.ಹೆಚ್.ಡಿ ಪದವಿಯನ್ನು ಪಡೆದಿರುತ್ತಾರೆ.

ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದು ಸುಮಾರು 09 ವರ್ಷಗಳ ಕಾಲ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ 1997ರಲ್ಲಿ ಕೆ.ಪಿ.ಎಸ್.ಸಿ ಮೂಲಕ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಹುದ್ದೆಗೆ ಆಯ್ಕೆಯಾಗಿ ಮಂಗಳೂರು, ಮೈಸೂರು, ದಾವಣಗೆರೆ, ಬಿಜಾಪುರ ಮತ್ತು ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲಾ 04 ಪ್ರಾಂತದ ವ್ಯಾಪ್ತಿಯ ಸುಮಾರು 13 ಜಿಲ್ಲೆಗಳಲ್ಲಿ ಇಲಾಖೆಯ ಸುಮಾರು 17 ವಿವಿಧ ಹುದ್ದೆಗಳಲ್ಲಿ ಉತ್ತಮ ಅಧಿಕಾರಿಯಾಗಿ ಕಾರ್ಯನಿರ್ವಹಿಸಿ "ಮಾರಾಟಾಧಿಕಾರಿಗಳ ಕೈಪಿಡಿ" ಎಂಬ ಪುಸ್ತಕವೂ ಸೇರಿದಂತೆ ವಿವಿಧ ಲೇಖನಗಳನ್ನು ಪ್ರಕಟಿಸಿರುತ್ತಾರೆ. ಮೈಸೂರಿನ ಆಡಳಿತಮಂಡಳಿ ತರಬೇತಿ ಸಂಸ್ಥೆ, ಬೆಂಗಳೂರಿನ ಆರ್.ಐ.ಸಿ.ಎಂ, ಅಪೆಕ್ಸ್ ಬ್ಯಾಂಕಿನ ಕೃಷಿ ತರಬೇತಿ ಸಂಸ್ಥೆ, ಸೌಹಾರ್ದ ಸಹಕಾರಿ ಮುಂತಾದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸಹಕಾರಿಗಳಿಗೆ, ಇಲಾಖೆಯ ಅಧಿಕಾರಿ/ನೌಕರರಿಗೆ ಮಾರ್ಗದರ್ಶನ ನೀಡಿರುತ್ತಾರೆ. ಲಕ್ನೋದ ಬರ್ಡ್ ಸಂಸ್ಥೆಯಿಂದ ಮಾಸ್ಟರ್ ಟ್ರೈನರ್ ಆಗಿ ತರಬೇತಿ ಪಡೆದ ಇವರು ನೆದರ್ ಲ್ಯಾಂಡ್, ಚೀನಾ ಹಾಂಕಾಂಗ್, ಮಲೇಶಿಯ, ಸಿಂಗಪೂರ್ ರಾಷ್ಟ್ರಗಳಿಗೆ ಪ್ರವಾಸ ಮಾಡಿ ಅಲ್ಲಿನ ಸಹಕಾರ ವ್ಯವಸ್ಥೆಯ ಬಗ್ಗೆ ಅಧ್ಯಯನ ಮಾಡಿರುತ್ತಾರೆ. ಸಹಕಾರ ಇಲಾಖೆಯ ಬೆರಳೆಣಿಕೆಯಷ್ಟು ಅಧಿಕಾರಿಗಳು ಕೆಲವು ನಿರ್ದಿಷ್ಟ ಸಹಕಾರ ಸಂಘಗಳ ಬಗೆ ಅಭ್ಯಸಿಸಿ ಇತಿಹಾಸ, ಕನ್ನಡ, ಅರ್ಥಶಾಸ್ತ್ರ ಮುಂತಾದ ವಿಷಯಗಳಲ್ಲಿ ಪಿ.ಹೆಚ್.ಡಿ. ಪದವಿ ಪಡೆದಿದ್ದರೂ ಸಹ ಸಹಕಾರ ವಿಷಯದಲ್ಲಿ ಪಿ.ಹೆಚ್.ಡಿ ಪದವಿ ಪಡೆದ ಇಲಾಖೆಯ ಅಧಿಕಾರಿಗಳಲ್ಲಿ ಶ್ರೀ ಗುರುಸ್ವಾಮಿರವರು ಮೊದಲಿಗರಾಗಿದ್ದಾರೆ.

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. ಸಹಕಾರ ಸಂಘದಲ್ಲಿ ಸದಸ್ಯ ಮತದಾನಕ್ಕೆ ಅನರ್ಹವಾಗುವುದು ..........................................**

ಎ) ಸುಸ್ತಿದಾರನಾಗಿದ್ದಾಗ

ಬಿ) ಚುನಾವಣೆ ಅಥವಾ ಸರ್ವಸದಸ್ಯರ ದಿನಾಂಕಕ್ಕೆ 12 ತಿಂಗಳ ಪೂರ್ವ ಸದಸ್ಯನಾಗಿರದಿದ್ದಾಗ

ಸಿ) ಐದು ಸರ್ವ ಸದಸ್ಯ ಸಭೆ ಪೈಕಿ ಮೂರರಲ್ಲಿ ಗೈರು ಹಾಜರಿದ್ದಾಗ

ಡಿ) ಮೇಲಿನ ಎಲ್ಲವು

**2. ಸಹಕಾರ ಸಂಘದ ವ್ಯವಸ್ಥಾಪನೆಯಲ್ಲಿ ಸದಸ್ಯರ ಭಾಗವಹಿಸುವಿಕೆ ಸಂಬಂಧ ಹೊಸ ಕಲಂ ........... ಕಾಯ್ದೆಯಲ್ಲಿ ಸೇರ್ಪಡೆಗೊಳಿಸಿದೆ.**

ಎ) ಕಲಂ–27ಬಿ

ಬಿ) ಕಲಂ–28ಸಿ

ಸಿ) ಕಲಂ–27ಎ

ಡಿ) ಕಲಂ–30ಎ

**3. ಸಹಕಾರ ಸಂಘದ ವ್ಯವಸ್ಥಾಪನೆಯು ............ ನಿಹಿತವಾಗಿರತಕ್ಕದ್ದು.**

ಎ) ಸರ್ವಸದಸ್ಯರ ಸಭೆಯಲ್ಲಿ

ಬಿ) ಅಧ್ಯಕ್ಷರಲ್ಲಿ

ಸಿ) ಆಡಳಿತ ಮಂಡಲಿಯಲ್ಲಿ

ಡಿ) ಮುಖ್ಯ ಕಾರ್ಯನಿರ್ವಾಹಕನಲ್ಲಿ

**4. ಆಡಳಿತ ಮಂಡಲಿಯಲ್ಲಿ ಆಕಸ್ಮಿಕವಾಗಿ ಖಾಲಿ ಬಿದ್ದ ನಿರ್ದೇಶಕರ ಸ್ಥಾನ ಆಡಳಿತ ಮಂಡಲಿಯ ಮೂಲ ಅವಧಿಯ ಅರ್ಧಕ್ಕಿಂತ ಕಡಿಮೆ ಇದ್ದಲ್ಲಿ ಭರ್ತಿ ಮಾಡುವ ಅಧಿಕಾರ ..................... ಇವರಿಗೆ ದತ್ತವಾಗಿರುತ್ತದೆ.**

ಎ) ಸಹಕಾರ ಚುನಾವಣಾ ಪ್ರಾಧಿಕಾರ

ಬಿ) ಆಡಳಿತ ಮಂಡಲಿ

ಸಿ) ಸರ್ವಸದಸ್ಯರ ಸಭೆ

ಡಿ) ನಿಬಂಧಕರು

**5. ಸಹಕಾರ ಚುನಾವಣಾ ಪ್ರಾಧಿಕಾರದ ಆಯುಕ್ತರನ್ನು ನೇಮಿಸುವ ಅಧಿಕಾರ ........................ ಇವರಿಗೆ ಇರುತ್ತದೆ.**

ಎ) ರಾಜ್ಯಪಾಲರು

ಬಿ) ಕರ್ನಾಟಕ ಸರ್ಕಾರ

ಸಿ) ಉಚ್ಛನ್ಯಾಯಾಲಯದ ನ್ಯಾಯಾಧೀಶರು

ಡಿ) ನಿಬಂಧಕರು

**6. ಸಹಕಾರ ಚುನಾವಣಾ ಪ್ರಾಧಿಕಾರದ ಆಯುಕ್ತರ ಅಧಿಕಾರ ಅವಧಿ ................................**

ಎ) ಮೂರು ವರ್ಷಗಳು

ಬಿ) ಆರು ವರ್ಷಗಳು

ಸಿ) ಐದು ವರ್ಷಗಳು

ಡಿ) ಎರಡು ವರ್ಷಗಳು

**7. ರಾಜ್ಯ ಸರ್ಕಾರವು ಸಹಕಾರ ಚುನಾವಣಾ ಆಯುಕ್ತರನ್ನು ಈ ................ ಕಾರಣದಿಂದ ಆತನ ಹುದ್ದೆಯಿಂದ ತೆಗೆದು ಹಾಕುಬಹುದು.**

ಎ) ಶಾಸನ ರೀತ್ಯ ತೀರ್ಪುಕೊಡಲ್ಪಟ್ಟು ದಿವಾಳೀಯಾಗಿದ್ದರೆ

ಬಿ) ಯಾವುದೇ ಅಪರಾಧದ ಸಂಬಂಧದಲ್ಲಿ ತಪ್ಪಿತಸ್ಥನೆಂದು ನಿರ್ಣಯಿಸಲ್ಪಟ್ಟಿದ್ದು ನೈತಿಕ ಅಧಃಪತ ನವನ್ನೊಳಗೊಂಡಿದ್ದರೆ

ಸಿ) ಅವನ ಪದಾವಧಿಯಲ್ಲಿ, ಅವನ ಪದದ ಕರ್ತವ್ಯದ ಹೊರಗೆ ವೇತನ ಪಡೆಯುವ ಉದ್ಯೋಗದಲ್ಲಿ ನಿರತನಾಗಿದ್ದರೆ.

ಡಿ) ಮೇಲಿನ ಎಲ್ಲವು

**8. ಸಹಕಾರ ಚುನಾವಣಾ ಆಯಕ್ತರು ರಾಜ್ಯ ಸರ್ಕಾರದ ಈ .................. ವೃಂದದ ದರ್ಜೆ ಅಧಿಕಾರಿ ಯಾಗಿರುತ್ತಾರೆ.**

ಎ) ಪ್ರಧಾನ ಕಾರ್ಯದರ್ಶಿ

ಬಿ) ಕಾರ್ಯದರ್ಶಿ

ಸಿ) ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ

ಡಿ) ಯಾವುದು ಅಲ್ಲ

**9. ಸಹಕಾರ ಸಂಘದ ಚುನಾವಣೆಯಲ್ಲಿ ಮತದಾರನನ್ನು ಗುರ್ತಿಸುವ ದಾಖಲಾತಿ .......................... ಆಗಿದೆ.**

ಎ) ಆಧಾರ್ ಕಾರ್ಡ್

ಬಿ) ವಾಹನ ಚಾಲನಾ ಪರವಾನಿಗೆ

ಸಿ) ಭಾರತದ ಚುನಾವಣಾ ಆಯೋಗದ ಗುರ್ತಿನ ಚೀಟಿ

ಡಿ) ಸಂಘದ ಮುಖ್ಯ ಕಾರ್ಯನಿರ್ವಾಹಕ ವಿತರಿಸಿದ ಗುರ್ತಿನ ಕಾರ್ಡ್

**10. ಸಹಕಾರ ಸಂಘದಲ್ಲಿ ನಡೆಯುವ ಆಡಳಿತ ಮಂಡಲಿ ಚುನಾವಣೆಯಲ್ಲಿ ನಾಮಪತ್ರ ಹಿಂಪಡಯುವ ವೇಳೆ ................................. ಅಗಿದೆ.**

ಎ) 4–00 ಪಿ.ಎಂ.

ಬಿ) 5–00 ಪಿ.ಎಂ.

ಸಿ) 3–00 ಪಿ.ಎಂ.

ಡಿ) 6–00 ಪಿ.ಎಂ.

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

1 -C, 2 -D, 3 –A, 4 – B, 5 –A, 6 –D, 7 –C, 8 –C , 9 –C , 10 – C